# ಜನತಾವಾಣಿ

ಸಂಪಾದಕರು :
ಎಂ.ಎಸ್. ವಿಕಾಸ್

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಬುಧವಾರ, ಜುಲೈ 31, 2024

ಸಂಪುಟ : 51 ಸಂಚಿಕೆ : 78 08192-254736 91642 99999 RNI No: 27369 ಪುಟ : 8 ರೂ : 5.00 www.janathavani.com janathavani@mac.com



# ಶಾಂತಿ, ನೆಮ್ಮದಿಯ ಬದುಕಿಗೆ ಧರ್ಮವೊಂದೇ ಆಶಾಕಿರಣ: ರಂಭಾಪುರಿ ಜಗದ್ಗುರುಗಳು

ದಾವಣಗೆರೆ, ಜು. 30- ಶಾಂತಿ, ನೆಮ್ಮದಿಯ ಬದುಕಿಗೆ ಧರ್ಮವೊಂದೇ ಆಶಾಕಿರಣ. ಮನುಷ್ಯ ಯಾವಾಗಲೂ ಸುಖವನ್ನು ಅಪೇಕ್ಷಿಸುತ್ತಾನೆ. ಸುಖದ ಮೂಲ ಧರ್ಮದ ಆಚರಣೆಯಲ್ಲಿದೆ ಎಂದು ಶ್ರೀ ರಂಭಾಪುರಿ ಡಾ.ವೀರ ಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು ನುಡಿದರು.

ನಗರದ ಶ್ರೀ ಅಭಿನವ ರೇಣುಕ ಮಂದಿರದ ಸಭಾಂಗಣದಲ್ಲಿ ಶ್ರೀ ಮದ್ವೀರಶೈವ ಸದ್ಬೋಧನಾ ಸಂಸ್ಥೆ ವತಿಯಿಂದ ಇಂದು ಆರಂಭಗೊಂಡಿರುವ 5 ದಿನಗಳ ಆಷಾಢ ಮಾಸದ ಇಷ್ಟಲಿಂಗ ಮಹಾಪೂಜೆ, ಜನ ಜಾಗೃತಿ ಧರ್ಮ ಸಮಾವೇಶದ ಉದ್ಘಾಟನಾ ಸಮಾರಂಭದ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ದೊಡ್ಡ ದೊಡ್ಡ ಮಾತುಗಳಿಂದ ಮನುಷ್ಯ ದೊಡ್ಡವನಾಗುವುದಿಲ್ಲ. ದೊಡ್ಡ ಮನಸ್ಸು, ಉನ್ನತ ಗುಣಗಳಿಂದ ದೊಡ್ಡಸ್ತಿಕೆ ಪ್ರಾಪ್ತವಾಗುತ್ತದೆ. ಅರಿತು ಬಾಳುವುದರಲ್ಲಿ ಬದುಕಿನ ಉತ್ಕರ್ಷತೆ ಇದೆ. ಮನುಷ್ಯನಲ್ಲಿ ಸದ್ಗುಣ ಮತ್ತು ದುರ್ಗುಣ ಎರಡೂ ಇವೆ. ಸದ್ಗುಣಿಗಳ ಒಡನಾಟದಲ್ಲಿ ಬಾಳಿದರೆ ಜೀವನ ವಿಕಾಸಗೊಳ್ಳುತ್ತದೆ. ದುರ್ಜನರ ಸಂಗದಲ್ಲಿ ಬಾಳಿದರೆ ಬದುಕು ವಿನಾಶಗೊಳ್ಳುತ್ತದೆ ಎಂದು ಹೇಳಿದರು.

ವೀರಶೈವ ಧರ್ಮ ಸಿದ್ಧಾಂತದಲ್ಲಿ ಜೀವನ ವಿಕಾಸದ ಅಧ್ಯಾತ್ಮ ತತ್ವಗಳನ್ನು ಜಗದ್ಗುರು ರೇಣುಕಾಚಾರ್ಯರು ಪ್ರತಿಪಾದಿಸಿದ್ದಾರೆ. ಧರ್ಮ, ನೀತಿ, ಒಳ್ಳೆಯ ಮಾತುಗಳನ್ನು ಅಳವಡಿಸಿಕೊಂಡರೆ ಶ್ರೇಯಸ್ಸು ಕಟ್ಟಿಟ್ಟ ಬುತ್ತಿ. ಮನುಷ್ಯ ಎಷ್ಟೇ ಎತ್ತರಕ್ಕೆ ಬೆಳೆದರೂ ಮೂಲ ಸಂಸ್ಕೃತಿಯನ್ನು ಯಾರೂ ಮರೆಯಬಾರದು. ಮೂಲ ಮರೆತರೆ ಜೀವನದಲ್ಲಿ ಅವನತಿ ನಿಶ್ಚಿತ ಎಂದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಉಪಾಧ್ಯಕ್ಷ ಅಣಬೇರು ರಾಜಣ್ಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಪಂಚಪೀಠಗಳಲ್ಲಿ ರಂಭಾಪುರಿ ಪೀಠ ಅತ್ಯಂತ ಶ್ರೇಷ್ಠವಾದುದು. ಜಗದ್ಗುರು ಡಾ. ವೀರ ಸೋಮೇಶ್ವರ ಸ್ವಾಮೀಜಿ ಪೀಠವನ್ನು ಸಾಕಷ್ಟು ಅಭಿವೃದ್ಧಿಗೊಳಿಸುವ ಜೊತೆಗೆ ಸಮಾಜ ತಿದ್ದುವ ಕಾರ್ಯದಲ್ಲಿ ತೊಡಗಿರುವುದು ಶ್ಲಾಘನೀಯ ಎಂದರು.

ಎಲ್ಲಾ ತ್ಯಾಗಗಳನ್ನು ಮಾಡಿ ಸಮಾಜೋದ್ಧಾರಕ್ಕಾಗಿ ಅವತರಿಸಿ ಬಂದಿದ್ದಾರೆ. ತಮ್ಮ ಹರಿತವಾದ ಲೇಖನಗಳ ಮೂಲಕ, ಧಾರ್ಮಿಕ ಸಭೆ-ಸಮಾರಂಭಗಳ ಮೂಲಕ ಧರ್ಮ, ಸಂಸ್ಕೃತಿ, ಸಂಸ್ಕಾರಗಳನ್ನು ಬಿತ್ತುವ ಕೆಲಸ ಮಾಡುತ್ತಾ ಬರುತ್ತಿದ್ದಾರೆ ಎಂದು ಹೇಳಿದರು.


ಎಸ್.ಎಸ್. ಆಸ್ಪತ್ರೆಯ ಪ್ಲಾಸ್ಟಿಕ್ ಸರ್ಜನ್ ಡಾ. ಕೆ.ಸಿ. ಶಿವಮೂರ್ತಿ ಅವರಿಗೆ 'ವೈದ್ಯ ಚಿಂತಾಮಣಿ' ಬಿರುದನ್ನಿತ್ತು ರಂಭಾಪುರಿ ಜಗದ್ಗುರುಗಳು ಶುಭ ಹಾರೈಸಿದರು.

ಗುರು-ಹಿರಿಯರು, ಹೆತ್ತ ತಂದೆ-ತಾಯಿಗಳನ್ನು ಸದಾ ಸ್ಮರಿಸುತ್ತಾ ಮುನ್ನಡೆದರೆ ಜೀವನದಲ್ಲಿ ಯಶಸ್ಸು ಸಾಧ್ಯ. ಕಾಲು ಜಾರಿ ಆಗುವ ಅಪಾಯಕ್ಕಿಂತ ನಾಲಿಗೆ ಜಾರುವುದರಿಂದ ಆಗುವ ಅನಾಹುತ ಹೆಚ್ಚು ಎಂದರು.

ಹರಪನಹಳ್ಳಿ ತೆಗ್ಗಿನಮಠ ಸಂಸ್ಥಾನದ ಡಾ.ವರಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಜೀವನದಲ್ಲಿ ದೇವರು, ಧರ್ಮ, ಗುರುಗಳು ಎಂಬ ಮೌಲ್ಯಗಳು ಮಾನವನ ನಂಬಿಕೆಗೆ ಇಂಬನ್ನು ನೀಡಿವೆ. ಭಾರತದ ಧರ್ಮ ಭೂಮಿಯಲ್ಲಿ ಮಾತ್ರ ಮನುಷ್ಯ ಸಂತಸದ ಬಾಳನ್ನು ಕಟ್ಟಿಕೊಡಲು ತುಂಬಾ ಸುಲಭದ ಸೂತ್ರ ಕಂಡುಕೊಂಡಿದ್ದಾನೆ ಎಂದರು. ವೀರಶೈವ ಧರ್ಮ ಪರಂಪರೆ ಪ್ರಾಚೀನವಾದುದು. ಈ ಧರ್ಮ ಕೊಟ್ಟಂತಹ ಸಂದೇಶ ಮತ್ತು ಕಾಯಕದಿಂದ ಜೀವನದ ಉಜ್ವಲತೆ ಕಾಣಬಹುದಾಗಿದೆ ಎಂದು ಹೇಳಿದರು.

ಕಾರ್ಯಕ್ರಮದ ನೇತೃತ್ವ ವಹಿಸಿದ್ದ ಕಣ್ವಕುಪ್ಪಿ ಗವಿಮಠದ ಡಾ.ನಾಲ್ವಡಿ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಅತಿಯಾದ ವೈಚಾರಿಕತೆಯ ದುಷ್ಪರಿಣಾಮದಿಂದ ಅನೇಕ ಸಂಕಷ್ಟ ಎದುರಿಸುವ ಪರಿಸ್ಥಿತಿ ಬಂದಿದೆ. ವೀರಶೈವ ಧರ್ಮದ ಮೂಲ ವಿಚಾರ ಧಾರೆಗಳನ್ನು ಅನುಸರಿಸಿ ಬಾಳಬೇಕೆಂದು ಹಿತ ನುಡಿದರು.

ಎಸ್.ಎಸ್. ಆಸ್ಪತ್ರೆಯ ಪ್ಲಾಸ್ಟಿಕ್ ಸರ್ಜನ್ ಡಾ. ಕೆ.ಸಿ. ಶಿವಮೂರ್ತಿ ಅವರಿಗೆ 'ವೈದ್ಯ ಚಿಂತಾಮಣಿ' ಬಿರುದನ್ನಿತ್ತು ರಂಭಾಪುರಿ ಶ್ರೀಗಳು ಶುಭ ಹಾರೈಸಿದರು. ಇದೇ ಸಂದರ್ಭದಲ್ಲಿ ಮಾತನಾಡಿದ ಡಾ. ಕೆ.ಸಿ. ಶಿವಮೂರ್ತಿ ಅವರು, ಜನರಲ್ಲಿ ಸದ್ಭಾವನೆ, ಧರ್ಮ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಸತತ 26 ವರ್ಷಗಳಿಂದ ಹಮ್ಮಿಕೊಂಡು ಬರಲಾಗುತ್ತಿದ್ದು, ಶ್ರೀಗಳ ಸಮಾಜ ಸೇವಾ ಕಾರ್ಯ ಪ್ರಶಂಸನೀಯ ಎಂದರು.

ಎಸ್.ಎಸ್. ಆಸ್ಪತ್ರೆ ಸಹ ಕಳೆದ 25 ವರ್ಷಗಳಿಂದ ಬಡ ಮಕ್ಕಳಿಗೆ ಉಚಿತವಾಗಿ ಶಸ್ತ್ರ ಚಿಕಿತ್ಸೆ ಮಾಡುತ್ತಾ ಬಂದಿದೆ. ಸಾರ್ವಜನಿಕರೂ ಸಹ ಬಾಪೂಜಿ ಸಂಸ್ಥೆಯ ಉಚಿತ ತಪಾಸಣೆ, ಚಿಕಿತ್ಸೆಗಳ ಪ್ರಯೋಜನ ಪಡೆಯುವಂತೆ ಮನವಿ ಮಾಡಿದರು.

> ವಿಶ್ವ ಬಂಧುತ್ವದ ಚಿಂತನೆಗಳನ್ನು ವೀರಶೈವ ಧರ್ಮ ಪ್ರತಿಪಾದಿಸಿದೆ. ಧರ್ಮದ ದಿಕ್ಸೂಚಿ ನಮ್ಮೆಲ್ಲರ ಬಾಳಿನ ಉನ್ನತಿಗೆ ಕಾರಣವಾಗುತ್ತದೆ. ಗುರುಗಳ, ಶರಣರ ಆದರ್ಶ ಚಿಂತನೆಗಳು ನಮ್ಮೆಲ್ಲರ ಬದುಕಿಗೆ ಬೆಳಕು ತೋರುವಂತಾಗಲಿ.
>
> - ಅಣಬೇರು ರಾಜಣ್ಣ, ರಾಷ್ಟ್ರೀಯ ಉಪಾಧ್ಯಕ್ಷರು, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ

ಹಾರನಹಳ್ಳಿ ಶಿವಯೋಗೀಶ್ವರ ಶಿವಾಚಾರ್ಯರು, ಚನ್ನಗಿರಿ ಕೇದಾರ ಶಿವಶಾಂತವೀರ ಶಿವಾಚಾರ್ಯರು ಉಪಸ್ಥಿತರಿದ್ದರು. ಚನ್ನಗಿರಿ ಹಿರೇಮಠದ ಡಾ. ಕೇದಾರ ಶಿವಶಾಂತವೀರ ಸ್ವಾಮೀಜಿ, ಹಾರನಹಳ್ಳಿ ಶ್ರೀ ಶಿವಯೋಗೀಶ್ವರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಶ್ರೀ ಮದ್ವೀರಶೈವ ಸದ್ಬೋಧನಾ ಸಂಸ್ಥೆ ಜಿಲ್ಲಾಧ್ಯಕ್ಷ ದೇವರಮನಿ ಶಿವಕುಮಾರ್ ಮತ್ತು ಶ್ರೀ ಜಗದ್ಗುರು ರೇಣುಕ ಸಾಂಸ್ಕೃತಿಕ ಸಂಘದ ಅಧ್ಯಕ್ಷ ದೇವರಮನೆ ಶಿವರಾಜ್ ಅವರು ಕಾರ್ಯಕ್ರಮದ ಮುಂದಾಳತ್ವ ವಹಿಸಿದ್ದರು.

ಪಾಲಿಕೆ ಸದಸ್ಯೆ ಶಿವಲೀಲಾ ಎನ್.ಎಂ. ಕೊಟ್ರಯ್ಯ, ಡಿಹೆಚ್‌ಯುಸಿ ಬ್ಯಾಂಕ್ ಉಪ ಪ್ರಧಾನ ವ್ಯವಸ್ಥಾಪಕ ಕೆ.ಎಂ. ರುದ್ರಮುನಿ, ಮ್ಯಾನೇಜರ್ ಪರಮೇಶ್ವರಪ್ಪ, ಶಿವಾನಿ ಮೆಡಿಕಲ್ಸ್ ಡಿ.ಕೆ.ಮಾಲತೇಶ್, ಗುತ್ತಿಗೆದಾರ ಲಿಂಗರಾಜ ಬಸಾಪುರ, ಮಂಜುಳ ಹೆಚ್.ಆರ್., ಐಗೂರು ಪ್ರಭು, ಚಂದ್ರಕಾಂತ್ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಗಣ್ಯರಿಗೂ ಹಾಗೂ ದಾನಿಗಳಿಗೂ ಶ್ರೀ ರಂಭಾಪುರಿ ಜಗದ್ಗುರುಗಳು ಗೌರವ ಶ್ರೀರಕ್ಷೆ ನೀಡಿದರು. ರಾಜಶೇಖರ ಗುಂಡಗಟ್ಟಿ ಮತ್ತಿತರರಿದ್ದರು.

ಹರಿಹರದ ಕಾಂತರಾಜ್ ಹಾಗೂ ವೀರೇಶ್ ಬಡಿಗೇರ್ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು. ಜಯದೇವ ದೇವರಮನೆ ಸ್ವಾಗತಿಸಿದರು. ಪ್ರೊ.ಮಲ್ಲಯ್ಯ ನಿರೂಪಿಸಿದರು. ಹರೀಶ್ ಎನ್.ಕೆ. ಜಗದ್ಗುರುಗಳಿಗೆ ಗೌರವ ಮಾಲಾರ್ಪಣೆ ಸಲ್ಲಿಸಿದರು.

## ಎಂಟನೇ ವೇತನ ಆಯೋಗದ ಪ್ರಸ್ತಾಪ ಇಲ್ಲ : ಕೇಂದ್ರ

ನವದೆಹಲಿ, ಜು. 30 - ಎಂಟನೇ ಕೇಂದ್ರ ವೇತನ ಆಯೋಗ ರಚನೆಗೆ ಸಂಬಂಧಿಸಿದಂತೆ ಎರಡು ಮನವಿಗಳು ಬಂದಿವೆ. ಆದರೆ, ಈ ರೀತಿಯ ಆಯೋಗ ರಚಿಸುವ ಯಾವುದೇ ಪ್ರಸ್ತಾಪ ಇಲ್ಲ ಎಂದು ಕೇಂದ್ರ ಸರ್ಕಾರ ಸಂಸತ್ತಿಗೆ ತಿಳಿಸಿದೆ. ಜನವರಿ 1, 2026 ರ ಒಳಗೆ ವೇತನ ಆಯೋಗ ಜಾರಿಗೆ ತರಬೇಕಿದೆ.

ಈ ಬಗ್ಗೆ ಎರಡು ಮನವಿಗಳು ಬಂದಿವೆ. ಆದರೆ ಸರ್ಕಾರ ಈ ಬಗ್ಗೆ ಯಾವುದೇ ಪರಿಶೀಲನೆ ನಡೆಸುತ್ತಿಲ್ಲ ಎಂದು ಕೇಂದ್ರ ಹಣಕಾಸು ಸಚಿವಾಲಯದ ರಾಜ್ಯ ಸಚಿವ ಪಂಕಜ್ ಚೌಧರಿ ರಾಜ್ಯಸಭೆಗೆ ತಿಳಿಸಿದ್ದಾರೆ. ಸಾಮಾನ್ಯವಾಗಿ ಕೇಂದ್ರ ಸರ್ಕಾರ 10 ವರ್ಷಗಳಿಗೊಮ್ಮೆ ವೇತನ ಪರಿಷ್ಕರಣೆಗಾಗಿ ಆಯೋಗ ರಚಿಸುತ್ತದೆ. 2014 ರ ಫೆಬ್ರವರಿಯಲ್ಲಿ ಏಳನೇ ವೇತನ ಆಯೋಗ ರಚಿಸಲಾಗಿತ್ತು. ಅದರ ವರದಿಯನ್ನು ಜನವರಿ 1, 2016ರಲ್ಲಿ ಜಾರಿಗೆ ತರಲಾಗಿತ್ತು.

## ಭಾರತಕ್ಕೆ ಮತ್ತೊಂದು ಕಂಚಿನ ಪದಕ

ನವದೆಹಲಿ, ಜು. 30 – ಫ್ರಾನ್ಸ್‌ನಲ್ಲಿ ನಡೆಯುತ್ತಿರುವ ಒಲಂಪಿಕ್ಸ್ ಪಂದ್ಯಾವಳಿಯಲ್ಲಿ 10 ಮೀಟರ್ ಏರ್ ಪಿಸ್ತೂಲ್ ಮಿಕ್ಸಡ್ ತಂಡ ವಿಭಾಗದಲ್ಲಿ ಮನು ಭಾಕರ್ ಹಾಗೂ ಸರಬ್‌ಜೋತ್ ಸಿಂಗ್ ಅವರು ಭಾರತಕ್ಕೆ ಕಂಚಿನ ಪದಕ ತಂದುಕೊಂಡಿದ್ದಾರೆ.


ಒಂದೇ ಒಲಂಪಿಕ್ಸ್‌ನಲ್ಲಿ ಎರಡು ಪದಕದೊಂದಿಗೆ ಮನು ಭಾಕರ್ ದಾಖಲೆ

ಇದರೊಂದಿಗೆ ಸ್ವತಂತ್ರ ಭಾರತದಲ್ಲಿ ಒಂದೇ ಒಲಂಪಿಕ್ಸ್‌ನಲ್ಲಿ ಎರಡು ಪದಕ ಪಡೆದ ಮೊದಲ ಆಟಗಾರ್ತಿಯಾಗಿ ಮನು ಭಾಕರ್ ಹೊರ ಹೊಮ್ಮಿದ್ದಾರೆ.

ಭಾರತದ ಜೋಡಿಯು ಕೊರಿಯಾದ ಲೀ ವೊನೊಹೊ ಹಾಗೂ ಒಹ್ ಯೇಹ್ ಜಿನ್ ಅವರನ್ನು 16 – 10 ಅಂತರದಿಂದ ಸೋಲಿಸುವ ಮೂಲಕ ಪದಕ ಪಡೆದಿದೆ. 22 ವರ್ಷದ ಭಾಕರ್ ಅವರು ಈ ಹಿಂದೆ ಮಹಿಳೆಯರ 10 ಮೀಟರ್ ಏರ್ ಪಿಸ್ತೂಲ್ ವಿಭಾಗದಲ್ಲಿ ಕಂಚಿನ ಪದಕ ಪಡೆದಿದ್ದರು. ಇದಕ್ಕೂ ಮುಂಚೆ ಬ್ರಿಟಿಷರ ಆಡಳಿತ ಇದ್ದಾಗ 1900ರಲ್ಲಿ ನಡೆದ ಒಲಂಪಿಕ್ಸ್‌ನಲ್ಲಿ ಬ್ರಿಟಿಷ್ - ಭಾರತದ ಕ್ರೀಡಾಪಟು ನೊರ್ಮಾನ್ ಪ್ರಿಚಾರ್ಡ್ ಅವರು ಓಟದ ಸ್ಪರ್ಧೆ ವಿಭಾಗದಲ್ಲಿ ಎರಡು ಬೆಳ್ಳಿ ಪದಕ ಪಡೆದಿದ್ದರು.

ಈಗ ಮನು ಭಾಕರ್ ಅವರು ಮಹಿಳಾ ವಿಭಾಗದಲ್ಲಿ ಅಚ್ಚಳಿಯದ ಸಾಧನೆ ಮಾಡಿದ್ದಾರೆ. ಸರಬ್‌ಜೋತ್ ಅವರು ಶನಿವಾರ ನಡೆದ ಪುರುಷರ 10 ಮೀಟರ್ ಏರ್ ಪಿಸ್ತೂಲ್ ಫೈನಲ್‌ನಲ್ಲಿ ಪದಕ ಪಡೆಯಲು ವಿಫಲರಾಗಿದ್ದರು. ನಂತರ ಮಿಕ್ಸಡ್ ವಿಭಾಗದಲ್ಲಿ ಪದಕದ ಕೊರತೆ ನೀಗಿದ್ದಾರೆ.

ಮಿಕ್ಸಡ್ ವಿಭಾಗದಲ್ಲಿ 16 ಅಂಕಗಳನ್ನು ಮೊದಲು ಪಡೆಯುವ ತಂಡ ಪದಕ ಗಳಿಸುತ್ತದೆ. ಭಾರತದ ಜೋಡಿ ಆರಂಭದಲ್ಲಿ ಹಿನ್ನಡೆ ಕಂಡಿತ್ತು. 0-2 ಅಂತರದಿಂದ ಹಿಂದುಳಿದಿತ್ತು. ಆದರೆ, ಭಾಕರ್ ಅವರ ಸ್ಥಿರ ಹೋರಾಟದ ಕಾರಣದಿಂದ ತಂಡ ಮುನ್ನಡೆ ಗಳಿಸಿ, ನಂತರ ಪದಕ ತನ್ನದಾಗಿಸಿಕೊಂಡಿತು.

## ಎಲ್ಲಾ ಕೆರೆಗಳನ್ನು ತುಂಬಿಸಬೇಕು, ಅಲಕ್ಷ್ಯ ಮಾಡಿದರೆ ಬಿಲ್ಲುಗಳನ್ನು ತಡೆ ಹಿಡಿಸುವ ಎಚ್ಚರಿಕೆ ನೀಡಿದ ಶಾಸಕ

ರಾಣೇಬೆನ್ನೂರು, ಜು. 29 - ಸ್ವಾತಂತ್ರ್ಯ ಬಂದಾಗ ಮನೆ ಕಟ್ಟಿಕೊಂಡಿದ್ದಾರೆ, ಪಕ್ಕಾ ರಸ್ತೆಗಳಾಗಿವೆ, ಮನೆಗಳಿಗೆ ವಿದ್ಯುತ್ ಸಂಪರ್ಕವಿದೆ, ಬೀದಿ ದೀಪಗಳಿವೆ, ಕುಡಿಯುವ ನೀರು ಸರಬರಾಜು ಇದೆ. ಆದರೆ, ಆ ಮನೆಗಳಿಗೆ ಮಾಲೀಕರ ಹೆಸರುಗಳೇ ಇಲ್ಲಾ! ದಲಿತರಿಗಾಗಿ ಮೀಸಲಿಟ್ಟ ಈ ಜಾಗದಲ್ಲಿರುವವರೆಲ್ಲ ದಲಿತರೇ. ಕಳೆದ ಬಾರಿ ನಾನು ಶಾಸಕನಾಗಿದ್ದಾಗ ನನ್ನ ಗಮನಕ್ಕೆ ಬಂದಿರಲಿಲ್ಲ. ಈಗ ಬಂದಿದೆ. ಈ ಬಗ್ಗೆ ಸೂಕ್ತ ಕ್ರಮ ಜರುಗಿಸಿ, ದಲಿತರ ಸಮಸ್ಯೆಯನ್ನ ಸರಿಪಡಿಸಬೇಕಿದೆ ಎಂದು ಬ್ಯಾಡಗಿ ಶಾಸಕ ಬಸವರಾಜ ಶಿವಣ್ಣನವರ ಹೇಳಿದರು.




ಇಲ್ಲಿನ ತಾ.ಪಂ. ಸಭಾ ಭವನದಲ್ಲಿ ನಿನ್ನೆ ಏರ್ಪಾಡಾಗಿದ್ದ, ತಮ್ಮ ಕ್ಷೇತ್ರಕ್ಕೆ ಬರುವ ರಾಣೇಬೆನ್ನೂರು ತಾಲ್ಲೂಕಿನ ಗ್ರಾಮಗಳ ಸಮಸ್ಯೆಗಳನ್ನು ಅಧಿಕಾರಿಗಳಿಂದ ಪಡೆದುಕೊಳ್ಳುತ್ತಿದ್ದ ಸಂದರ್ಭದಲ್ಲಿ ಬೆನಕನಕೊಂಡ ಗ್ರಾಮದ ದಲಿತರ ನೋವಿನ ಸಂಗತಿಯನ್ನು ಪ್ರಸ್ತಾಪಿಸಿದರು.

ಈ ಬಗ್ಗೆ ತಹಶೀಲ್ದಾರ್ ಹಾಗೂ ತಾ.ಪಂ. ಕಾರ್ಯ ನಿರ್ವಾಹಕ ಅಧಿಕಾರಿಗಳು ಮಾಡಿದ ಸಲಹೆಯನ್ನು ಬದಿಗಿಟ್ಟು, ಜಿ.ಪಂ. ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯ ಒಪ್ಪಿಗೆ ಪಡೆದು, ಆ ಜಾಗವನ್ನು ಹಾಗೂ ಈಗಾಗಲೇ ನಿರ್ಮಾಣಗೊಂಡಿರುವ ಮನೆಗಳ ಅಳತೆಯನ್ನು ನಮೂದಿಸಿ, ಆ ಮನೆಗಳಲ್ಲಿರುವವರಿಗೆ ಹಕ್ಕುಪತ್ರಗಳನ್ನು ವಿತರಿಸಿ, ಈ ಕಾರ್ಯ ಒಂದು ತಿಂಗಳೊಳಗಾಗಿ ಪೂರೈಸಬೇಕು ಎಂದು ಅಧಿಕಾರಿಗಳಿಗೆ ಸದಾಸಕರು ಕಟ್ಟಪ್ಪಣೆ ಮಾಡಿದರು.

ಕೆರೆಮಲ್ಲಾಪುರದಲ್ಲಿರುವ ಮೇಲ್ ಚಾನಲ್‌ನ ನೀರು ಬಸಿಯುತ್ತಿದ್ದುದರಿಂದ ಗ್ರಾಮದ ಎಲ್ಲ ಮನೆಗಳು, ಗೋಡೆಗಳು ನೆನೆದು ತನಿಸಿಯೇರಿವೆ. ಅಲ್ಲಿನ ಜನ ರಾತ್ರಿ ನೆಮ್ಮದಿಯಿಂದ ನಿದ್ರೆ ಮಾಡದಂತಾಗಿದೆ. ಕಾರಣ ಚಾನಲ್ ನೀರು ಬಸಿಯದಂತೆ ಕ್ರಮ, ಗುಡ್ಡದ ಬೇವಿನಹಳ್ಳಿ ಹಾಗೂ ಸುಣಕಲ್ಲು ಬಿದರಿ ಗ್ರಾಮಗಳ ಅಂಗನವಾಡಿ ಕಟ್ಟಡಗಳ ನಿರ್ಮಾಣಕ್ಕೆ ಕ್ರಮ ಜರುಗಿಸಲು ಅಭಿಯಂತರರಿಗೆ ಶಾಸಕ ಬಸವರಾಜ ಶಿವಣ್ಣನವರ ಸೂಚನೆ ನೀಡಿದರು.

ತಮ್ಮ ಕ್ಷೇತ್ರದಲ್ಲಿನ ಎಲ್ಲ ಕೆರೆಗಳನ್ನು ತುಂಬಿಸಬೇಕು. ಅಲಕ್ಷ್ಯ ಮಾಡಿದರೆ ನಿಮಗೆ ಬರಬೇಕಾದ ಬಿಲ್ಲುಗಳನ್ನು ತಡೆ ಹಿಡಿಸುವ ಎಚ್ಚರಿಕೆ ನೀಡಿದ ಶಾಸಕರು ಇಲಾಖಾವಾರು ಅಧಿಕಾರಿಗಳಿಂದ ಸಂಪೂರ್ಣ ಮಾಹಿತಿ ಪಡೆದು ಬಡವರನ್ನು, ರೈತರನ್ನು, ತುಳಿತಕ್ಕೊಳಪಟ್ಟವರನ್ನು ಅಲೆದಾಡಿಸದೆ ಅವರ ಕೆಲಸ ಮಾಡಿಕೊಡಿ ಎಂದು ಸೂಚನೆ ನೀಡಿದರು. ವೇದಿಕೆಯಲ್ಲಿ ತಹಶಿಲ್ದಾರ್ ಗುರುಬಸವರಾಜ ಹಾಗೂ ಇ.ಓ. ಸುಮಲತಾ ಇದ್ದರು.

## ಭದ್ರಾ ಜಲಾಶಯ



ನೀರಿನ ಮಟ್ಟ : 183 ಅಡಿ 2 ಇಂಚು
ಒಳ ಹರಿವು : 20774 ಕ್ಯೂಸೆಕ್ಸ್
ಹೊರ ಹರಿವು : 1954 ಕ್ಯೂಸೆಕ್ಸ್
ಕಳೆದ ವರ್ಷ : 161 ಅಡಿ 6 ಇಂಚು

## ಉನ್ನತ ಶಿಕ್ಷಣ ಪಡೆಯಲು ನೈತಿಕ ಶಿಕ್ಷಣ ಬೇಕು

### ಹರಪನಹಳ್ಳಿ ಕಾನೂನು ಅರಿವು ಕಾರ್ಯಕ್ರಮದಲ್ಲಿ ರಾಮನಗೌಡ ಪಾಟೀಲ್

ಹರಪನಹಳ್ಳಿ, ಜು. 30- ನೈತಿಕ ಶಿಕ್ಷಣದಿಂದ ಮಾತ್ರ ಉನ್ನತ ಶಿಕ್ಷಣವನ್ನು ಪಡೆಯಲು ಸಾಧ್ಯ ಎಂದು ವಕೀಲರ ಸಂಘದ ಅಧ್ಯಕ್ಷ ರಾಮನಗೌಡ ಪಾಟೀಲ್ ಹೇಳಿದರು.



ಪಟ್ಟಣದ ಹೆಚ್.ಪಿ.ಎಸ್ ಪದವಿ ಮಹಾ ವಿದ್ಯಾಲಯದಲ್ಲಿ ತಾಲ್ಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ಪೊಲೀಸ್ ಇಲಾಖೆ ವತಿಯಿಂದ ಹಮ್ಮಿಕೊಳ್ಳಲಾಗಿದ್ದ 'ಮಾನವ ಕಳ್ಳ ಸಾಗಾಣಿಕೆ ತಡೆ ದಿನಾಚರಣೆ' ಕುರಿತ ಕಾನೂನು ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಾಲೇಜು ವಿದ್ಯಾರ್ಥಿಗಳು ನೈತಿಕ ಶಿಕ್ಷಣ ಪಡೆದು, ತಂದೆ-ತಾಯಿಗೆ ಗೌರವ ತರುವಂತಹ ಪ್ರತಿಭಾವಂತ ವಿದ್ಯಾರ್ಥಿಗಳಾಗಿ ಹೊರ ಹೊಮ್ಮಿದಾಗ ಮಾತ್ರ ಸೃಜನಶೀಲ ವ್ಯಕ್ತಿಯಾಗಿ ಬೆಳೆಯುವುದಕ್ಕೆ ಸಾಧ್ಯ ಮತ್ತು ಶಿಕ್ಷಕರು ಮತ್ತು ಉಪನ್ಯಾಸಕರುಗಳ ಮಾರ್ಗದರ್ಶನದಲ್ಲಿ ನಡೆದಾಗ ಒಳ್ಳೆಯ ಬೋಧನೆ ಪಡೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎಂದರು.

ವಕೀಲ ಎಂ.ಮೃತ್ಯುಂಜಯ ಅವರು ಮಾನವ ಸಾಗಾಣಿಕೆಯ ಬಗ್ಗೆ ಉಪನ್ಯಾಸ ನೀಡಿ, ಸ್ವಾತಂತ್ರ್ಯ ಪೂರ್ವದಲ್ಲಿ ಮಾನವ ಕಳ್ಳ ಸಾಗಾಣಿಕೆಗೆ ಹೆಚ್ಚಿನ ಜನ ಬಲಿಯಾಗುತ್ತಿದ್ದರು. ಆಧುನಿಕತೆ ಬೆಳೆದ ಹಾಗೆ ಅನೇಕ ಅಕ್ರಮ ವ್ಯವಹಾರಗಳು ನಡೆಯುತ್ತಿದ್ದು, ಅದನ್ನು ನಾವು ತಡೆಗಟ್ಟಬೇಕು ಎಂದರು.

1956ರಲ್ಲಿ ಮಾನವ ಕಳ್ಳಸಾಗಣೆ ಕಾಯ್ದೆ ಜಾರಿಗೆ ತರಲಾಯಿತು. ನಾಗರಿಕ ಸೇವೆಗಳಲ್ಲಿ ಪ್ರಾಮಾಣಿಕತೆಯಿಂದ ಕಾರ್ಯ ನಿರ್ವಹಿಸಿದಾಗ ಇಂತಹ ಘಟನೆಗಳನ್ನು ತಡೆಗಟ್ಟಲು ಸಾಧ್ಯ ಎಂದರು.

ಎಎಸ್‌ಐ ಬಿ.ನಿಂಗಪ್ಪ ಮಾತನಾಡಿ, ಹಿಂದಿನ ಕಾಲದಲ್ಲಿ ಕಿತ್ತು ತಿನ್ನುವ ಬಡತನವಿತ್ತು, ಆರ್ಥಿಕ ಪರಿಸ್ಥಿತಿ ಬಹಳ ದೊಡ್ಡಮಟ್ಟದಲ್ಲಿ ಹದಗೆಟ್ಟಿತ್ತು. ಅಂದು ಮಾನವರು ಸಂಕಷ್ಟದಲ್ಲಿದ್ದರು. ಅಂದಿನ ಪರಿಸ್ಥಿತಿಗೆ ಅನುಗುಣವಾಗಿ ತಂದೆ-ತಾಯಿಗಳು ಮಕ್ಕಳನ್ನು ಮಾರಾಟ ಮಾಡುತ್ತಿದ್ದರು, ಆದರೆ ಈಗ ಆ ಕಾಲದ ಪರಿಸ್ಥಿತಿ ನಿರ್ಮಾಣ ಮಾಡಲು ಕಾನೂನಿನಲ್ಲಿ ಯಾವುದೇ ತರಹದ ಅವಕಾಶ ಇಲ್ಲ. ಈಗ ಕಠಿಣ ಕಾನೂನು ಬಂದಿದೆ. ಕಾನೂನಿನ ನಿಯಮಗಳನ್ನು ಚಾಚೂ ತಪ್ಪದೇ ಪಾಲಿಸಬೇಕು ಎಂದು ಪದವಿ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಹಿರಿಯ ವಕೀಲ ಈರಣ್ಣ ಮಾತನಾಡಿದರು. ವಕೀಲರ ಸಂಘದ ಉಪಾಧ್ಯಕ್ಷ ಸಿ.ಪೀರ್ ಅಹಮ್ಮದ್, ಪ್ರಾಚಾರ್ಯ ಡಾ.ಮುತ್ತೇಶ ಎನ್., ವಕೀಲರಾದ ಸಿದ್ದೇಶ್ ಮತ್ತು ಬಿ. ತಿಪ್ಪೇಶ್, ತಾಲ್ಲೂಕು ಕಾನೂನು ಸೇವಾ ಸಮಿತಿಯ ಸಿಬ್ಬಂದಿ ಕೊಟ್ರೇಶ್, ಬಸವರಾಜ್ ಹಾಗೂ ಇತರರು ಹಾಜರಿದ್ದರು.

## ಒ.ಆರ್.ಒ.ಪಿ. ಪಿಂಚಣಿ ವಿಳಂಬ : ಕೇಂದ್ರಕ್ಕೆ 2 ಲಕ್ಷ ದಂಡ

ನವದೆಹಲಿ, ಜು. 30 - 'ಒಂದು ಹುದ್ದೆ ಒಂದು ಪಿಂಚಣಿ ಯೋಜನೆ' (ಒ.ಆರ್.ಒ.ಪಿ.) ಅಡಿ ಸೈನ್ಯದ ನಿವೃತ್ತ ಪೂರ್ಣಕಾಲಿಕ ಕ್ಯಾಪ್ಟನ್‌ಗಳಿಗೆ ನೀಡಬೇಕಾದ ಪಿಂಚಣಿ ವಿಳಂಬವಾಗಿರುವುದಕ್ಕೆ ಸರ್ಕಾರವನ್ನು ಸುಪ್ರೀಂ ಕೋರ್ಟ್ ತರಾಟೆಗೆ ತೆಗೆದುಕೊಂಡಿದೆ ಹಾಗೂ ಎರಡು ಲಕ್ಷ ರೂ.ಗಳ ದಂಡವನ್ನೂ ವಿಧಿಸಿದೆ. ನ್ಯಾಯಮೂರ್ತಿಗಳಾದ ಸಂಜೀವ್ ಖನ್ನ ಹಾಗೂ ಆರ್. ಮಹದೇವನ್ ಅನ್ನು ಒಳಗೊಂಡ ಪೀಠ ಈ ಕ್ರಮ ತೆಗೆದುಕೊಂಡಿದೆ. ಲೋಪಗಳನ್ನು ನಿವಾರಿಸಲು ಕೊನೆಯ ಅವಕಾಶ ನೀಡಿರುವ ನ್ಯಾಯಾಲಯ ಮುಂದಿನ ವಿಚಾರಣೆಯನ್ನು ನವೆಂಬರ್ 25ಕ್ಕೆ ನಿಗದಿಪಡಿಸಿದೆ.

## ಸ್ವಚ್ಛ ಭಾರತ್ ಮಿಷನ್ : ಅರ್ಜಿ

ದಾವಣಗೆರೆ, ಜು.30- ಸ್ವಚ್ಛ ಭಾರತ್ ಮಿಷನ್ 2.0 ರ ಅಡಿಯಲ್ಲಿ ಐಇಸಿ ಚಟುವಟಿಕೆಗಳನ್ನು ಕೈಗೊಳ್ಳಲು ಸ್ವಸಹಾಯ ಗುಂಪು ಎಸ್‌ಹೆಚ್‌ಜಿ, ಸರ್ಕಾರೇತರ ಸಂಸ್ಥೆ ಎನ್‌ಜಿಓ ಸದಸ್ಯರ ನೇಮಕಾತಿಗಾಗಿ ಆಸಕ್ತಿಯುಳ್ಳ ಸದಸ್ಯರಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಯ್ಕೆ ಪ್ರಕ್ರಿಯೆ ಮತ್ತು ವೇತನಕ್ಕೆ ಸಂಬಂಧಿಸಿದ ವಿವರಗಳು www.davanagerecity.mrc.gov.in ಅಂತರ್ಜಾಲ ತಾಣದಲ್ಲಿ ಲಭ್ಯವಿರುತ್ತದೆ. ಆಸಕ್ತರು ಆಗಸ್ಟ್ 2ರೊಳಗೆ ಪಾಲಿಕೆ ಕಚೇರಿಗೆ ತಲುಪಿಸುವಂತೆ ಪಾಲಿಕೆ ಆಯುಕ್ತೆ ರೇಣುಕಾ ತಿಳಿಸಿದ್ದಾರೆ.

## ಎ.ಆರ್.ಜಿ. ಕಾಲೇಜಿನ ಪ್ರಾಧ್ಯಾಪಕ ಡಾ. ಮಲ್ಲಿಕಾರ್ಜುನಪ್ಪ ಇಂದು ನಿವೃತ್ತಿ



ದಾವಣಗೆರೆ, ಜು. 30- ಬಾಪೂಜಿ ವಿದ್ಯಾಸಂಸ್ಥೆಯ ಎ.ಆರ್.ಜಿ. ಕಾಲೇಜಿನ ಇತಿಹಾಸ ಪ್ರಾಧ್ಯಾಪಕ ಡಾ. ಜೆ.ಕೆ. ಮಲ್ಲಿಕಾರ್ಜುನಪ್ಪ ಅವರು ನಾಳೆ ಬುಧವಾರ ಸೇವೆಯಿಂದ ವಯೋನಿವೃತ್ತಿ ಹೊಂದಲಿದ್ದಾರೆ.


ಸುದೀರ್ಘ 36 ವರ್ಷಗಳ ಕಾಲ ಅಧ್ಯಾಪಕರಾಗಿದ್ದ ಅವರು, ಇತಿಹಾಸ ಸಂಶೋಧಕರಾಗಿ, ಬೋಧಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ತಮ್ಮ ವೃತ್ತಿಯ ಜೊತೆ-ಜೊತೆಗೆ ಹಲವಾರು ಸಾಮಾಜಿಕ ಸಂಘಟನೆಗಳಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಇತಿಹಾಸ ಸಂಶೋಧಕರಾಗಿ ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದಲ್ಲಿ ಸಂಶೋಧನಾ ಮಾರ್ಗದರ್ಶಕರಾಗಿದ್ದಾರೆ.

ಇತಿಹಾಸ, ಸಂಸ್ಕೃತಿ, ಪರಂಪರೆ, ವ್ಯಕ್ತಿತ್ವ ನಿರ್ಮಾಣ, ಸುಕ್ಷೇಮ ಮತ್ತು ಸುರಕ್ಷಾ ಆರೋಗ್ಯ ಮುಂತಾದ ವಿಷಯಗಳ ಕುರಿತು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ, ನೂರಾರು ಲೇಖನಗಳನ್ನು ಮಂಡಿಸಿ ಪ್ರಕಟಿಸಿದ್ದಾರೆ.

ಮಲ್ಲಿಕಾರ್ಜುನಪ್ಪ ಅವರ ಈ ಸೇವೆಯನ್ನು ಗೌರವಿಸಿದ ಕಜಕಿಸ್ಥಾನದ ದಿ ಓಪನ್ ಇಂಟರ್‌ನ್ಯಾಷನಲ್ ಯೂನಿವರ್ಸಿಟಿ ಫಾರ್ ಕಾಂಪ್ಲಿಮೆಂಟರಿ ಮೆಡಿಸಿನ್ ಸಂಸ್ಥೆಯು ಅವರಿಗೆ ಗೌರವ ಡಾಕ್ಟರೇಟ್ ನೀಡಿದೆ.

## ಹುಲುಗಿನಹೊಳೆ ಎಂ. ಚಂದ್ರಶೇಖರಯ್ಯ ನಿಧನ



ಹರಿಹರ ತಾಲ್ಲೂಕು ಹುಲುಗಿನಹೊಳೆ ಗ್ರಾಮದ ವಾಸಿ ನಿವೃತ್ತ ಬಿಡಿಓ ಎಂ. ಚಂದ್ರಶೇಖರಯ್ಯ (84) ಇವರು ದಿನಾಂಕ 30.7.2024ರ ಮಂಗಳವಾರ ರಾತ್ರಿ 9.30ಕ್ಕೆ ನಿಧನರಾದರು. ಪತ್ನಿ ಸರ್ವಮಂಗಳಮ್ಮ, ಪುತ್ರ, ಪುತ್ರಿಯರು, ಅಳಿಯಂದಿರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 31.7.2024ರ ಬುಧವಾರ ಮಧ್ಯಾಹ್ನ 12 ಕ್ಕೆ ಸ್ವಗ್ರಾಮವಾದ ಹರಿಹರ ತಾಲ್ಲೂಕು ಹುಲುಗಿನಹೊಳೆ ಗ್ರಾಮದಲ್ಲಿ ನೆರವೇರಲಿದೆ.

## ತಿಪ್ಪಣನವರ ಶ್ರೀಮತಿ ಲಲಿತಮ್ಮ ನಿಧನ



ಹರಿಹರ ಕಾಳಿದಾಸ ನಗರ ವಿಆರ್‌ಎಲ್ ಆಫೀಸ್ ರಸ್ತೆ, ನಾಯಕರ ಹಾಸ್ಟೆಲ್ ಎದುರಿನ ನಿವಾಸಿ ಲಿಂ. ತಿಪ್ಪಣ್ಣನವರ ಗುರುಶಾಂತಪ್ಪನವರ ಧರ್ಮಪತ್ನಿ

**ಶ್ರೀಮತಿ ಲಲಿತಮ್ಮ**

ಇವರು ದಿನಾಂಕ 30.7.2024ರ ಮಂಗಳವಾರ ಸಂಜೆ 7.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರಿಗೆ ಸುಮಾರು 90 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ, ನಾಲ್ವರು ಪುತ್ರಿಯರು, ಅಳಿಯಂದಿರು, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 31.7.2024ರ ಬುಧವಾರ ಮಧ್ಯಾಹ್ನ 2 ಕ್ಕೆ ಹರಿಹರದ ಹಿಂದೂ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ : ಯಜಮಾನ್ ತಿಪ್ಪಣ್ಣನವರ ವಂಶಸ್ಥರು ಮತ್ತು ಮೆಣಸಿನಕಾಯಿ ವಂಶಸ್ಥರು**

**ಮೊ : 94813 61636, 80887 35290**

## ಜಿ. ವಿಶ್ವನಾಥ (ಇಂಜಿನಿಯರ್ ) ನಿಧನ



ದಾವಣಗೆರೆ ಎಂ.ಸಿ.ಸಿ. 'ಬಿ' ಬ್ಲಾಕ್ ವಾಸಿ ದೊಗ್ಗನಾಳ್ ಗೌಡ್ರು ಜಿ.ಎನ್. ಅಜ್ಜಪ್ಪನವರ ಪುತ್ರ

**ಜಿ. ವಿಶ್ವನಾಥ (ಇಂಜಿನಿಯರ್)**

ಇವರು ದಿನಾಂಕ : 30.7.2024ರ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ನಿಧನರಾಗಿದ್ದಾರೆ. ಮೃತರಿಗೆ 83 ವರ್ಷ ವಯಸ್ಸಾಗಿತ್ತು. ಮೃತರು ಓರ್ವ ಪುತ್ರ, ಮೊಮ್ಮಗ, ಸೊಸೆ ಮತ್ತು ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತಿಮ ದರ್ಶನಕ್ಕಾಗಿ ಮೃತರ ಸ್ವಗೃಹ 'ಭರತ' 2ನೇ ಮುಖ್ಯ ರಸ್ತೆ, 3ನೇ ಅಡ್ಡ ರಸ್ತೆಯಲ್ಲಿ ಇರಿಸಲಾಗುತ್ತದೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 31.7.2024ರ ಬುಧವಾರ ಬೆಳಿಗ್ಗೆ 11 ಗಂಟೆಗೆ ಪಿ.ಬಿ. ರಸ್ತೆಗೆ ಹೊನ್ನೂರು-ಗೊಲ್ಲರಹಟ್ಟಿ ಹತ್ತಿರ ಇರುವ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

**ಮೊ : 98440 45606, 98863 97755**

|| ಶ್ರೀ ಶಿವನಾರದಮುನಿ ಪ್ರಸನ್ನ ||

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ತಾಲ್ಲೂಕು ಎಲೆಬೇತೂರು ಗ್ರಾಮದ ವಾಸಿ

**ಹನಗವಾಡಿ ದಿ. ವೀರಬಸಮ್ಮ ಹನಗವಾಡಿ ಮುರಿಗೆಪ್ಪ ಮತ್ತು ಮಕ್ಕಳು ಹಾಗೂ ಶ್ರೀಮತಿ ನಿರ್ಮಲ**

ಇವರು ಮಾಡುವ ವಿಜ್ಞಾಪನೆಗಳು. ದಿನಾಂಕ : 23.07.2024ನೇ ಮಂಗಳವಾರ ಸಂಜೆ 5.09ಕ್ಕೆ ನನ್ನ ಪೂಜ್ಯ ಪತಿಯವರಾದ

**ಶ್ರೀ ನಾಗರಾಜ ಹೆಚ್.ಎಂ**

ಇವರು, ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **'ಕೈಲಾಸ ಶಿವಗಣಾರಾಧನೆ'ಯನ್ನು** ದಿನಾಂಕ: 31.7.2024ನೇ ಬುಧವಾರ ಬೆಳಿಗ್ಗೆ 10.30ಕ್ಕೆ ದಾವಣಗೆರೆ ತಾಲ್ಲೂಕು ಎಲೆಬೇತೂರು ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

**ಇಂತಿ ದುಃಖತಪ್ತರು : ಧರ್ಮಪತ್ನಿ ನಿರ್ಮಲ ಮತ್ತು ಮಕ್ಕಳು ಅಳಿಯಂದಿರು, ಸಹೋದರರು, ಸಹೋದರಿಯರು, ಮೊಮ್ಮಕ್ಕಳು ಹನಗವಾಡಿ ವಂಶಸ್ಥರು ಹಾಗೂ ಬಂಧು-ಮಿತ್ರರು. ಮೊ : 96322 25115**

ವಿ.ಸೂ. : ಆತ್ಮೀಯರೇ, ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

## ಭಾವಸಾರ ವಿಜನ್ ಎಜುಕೇಶನ್ ಟ್ರಸ್ಟ್‌ನಿಂದ ಸ್ಕಾಲರ್‌ಶಿಪ್‌ಗೆ ಅರ್ಜಿ

ದಾವಣಗೆರೆ, ಜು.30- ನಗರದ ಭಾವಸಾರ ವಿಜನ್ ಎಜುಕೇಶನ್ ಟ್ರಸ್ಟ್ ವತಿಯಿಂದ ಭಾವಸಾರ ಕ್ಷತ್ರೀಯ ಬಡ ಹಾಗೂ ಪ್ರತಿಭಾವಂತ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರಿಗೆ ಎಸ್ಸೆಸ್ಸೆಲ್ಸಿ, ದ್ವಿತೀಯ ಪಿ.ಯು.ಸಿ ಅಂಕ ಗಳಿಸಿರುವ ವಿದ್ಯಾರ್ಥಿಗಳಿಗೆ ಸ್ಕಾಲರ್ ಶೀಪ್ ನೀಡಲಾಗು ವುದು. ನಾಳೆಯೊಳಗೆ ನಿಗದಿತ ಅರ್ಜಿಯನ್ನು ನಗರದ ಮಹಾರಾಜಪೇಟೆ ಯಲ್ಲಿರುವ ಶ್ರೀ ವಿಠಲ ಮಂದಿರದ ವ್ಯವಸ್ಥಾಪಕರಲ್ಲಿ ಪಡೆದು ಭರ್ತಿ ಮಾಡಿದ ಅರ್ಜಿಯನ್ನು ವ್ಯವಸ್ಥಾಪಕ ರಲ್ಲಿ ಸಲ್ಲಿಸುವಂತೆ ಟ್ರಸ್ಟ್ ಅಧ್ಯಕ್ಷ ವಾಗೀಶಬಾಬು ಗುಜ್ಜರ್ ತಿಳಿಸಿದ್ದಾರೆ.

## ರಾಜ್ಯದಲ್ಲೂ ಮಳೆ : ಎಚ್ಚರಿಕೆಗೆ ಒತ್ತಾಯ

ಬೆಂಗಳೂರು, ಜು. 30 - ನೆರೆ ರಾಜ್ಯ ಕೇರಳದಂತೆ ಕರ್ನಾಟಕದ ಅನೇಕ ಜಿಲ್ಲೆಗಳಲ್ಲಿ ಭಾರೀ ಮಳೆಯಿಂದ ಹಾನಿಗಳು ಸಂಭವಿಸುವ ಸಾಧ್ಯತೆ ಇದ್ದು, ರಾಜ್ಯ ಸರ್ಕಾರ ದಿನದ 24 ಗಂಟೆ ರಕ್ಷಣಾ ಸಿಬ್ಬಂದಿಯನ್ನು ಸನ್ನದ್ಧ ಸ್ಥಿತಿಯಲ್ಲಿಡಬೇಕು ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಒತ್ತಾಯಿಸಿದ್ದಾರೆ.

ಈ ಸಂಬಂಧ ಟ್ವೀಟ್ ಮಾಡಿರುವ ಅವರು, ತೀವ್ರ ಮಳೆ ಬೀಳುತ್ತಿರುವ ಹಾಗೂ ಅಪಾಯಕಾರಿ ಎಂಬುದಾಗಿ ಗುರುತಿಸಿರುವ ಸ್ಥಳಗಳಿಗೆ ಮುನ್ನೆಚ್ಚರಿಕೆ ಕ್ರಮವಾಗಿ ಅಧಿಕಾರಿಗಳನ್ನು ನಿಯೋಜಿಸಬೇಕು ಎಂದು ಸಲಹೆ ನೀಡಿದ್ದಾರೆ. ಭೂಕುಸಿತದಂತಹ ಸಮಸ್ಯೆ ಎದುರಾಗಿರುವ ಸ್ಥಳಗಳಲ್ಲಿ ಸಾರ್ವಜನಿಕರು ಬಹಳ ಎಚ್ಚರಿಕೆ ವಹಿಸಬೇಕು ಎಂದು ಅವರು ಸಲಹೆ ನೀಡಿದ್ದಾರೆ.

ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಬುಧವಾರ, ಜುಲೈ 31, 2024

## ಜಿಲ್ಲಾಸ್ಪತ್ರೆ ಅಭಿವೃದ್ಧಿ ಕಾರ್ಯ ಚುರುಕುಗೊಳಿಸಿ

### ಕೆಡಿಪಿ ಸಭೆಯಲ್ಲಿ ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್ಸೆಸ್ಸೆಂ ಸೂಚನೆ

ದಾವಣಗೆರೆ, ಜು. 30- ಜಿಲ್ಲಾಸ್ಪತ್ರೆಯ ಅಭಿವೃದ್ಧಿ ಕಾರ್ಯಗಳನ್ನು ಚುರುಕುಗೊಳಿಸುವಂತೆ ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಅಧಿಕಾರಿಗಳಿಗೆ ಸೂಚಿಸಿದರು.

ಮಂಗಳವಾರ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ 2024-25ನೇ ಸಾಲಿನ ಮೊದಲ ತ್ರೈ ಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಆರೋಗ್ಯ ಸಚಿವರು ಜಿಲ್ಲೆಗೆ ಬಂದಾಗ ಚಿಗಟೇರಿ ಆಸ್ಪತ್ರೆ ಹೊಸ ಬ್ಲಾಕ್ ನಿರ್ಮಾಣಕ್ಕೆ 18 ಕೋಟಿ ಮಂಜೂರು ಮಾಡಿದ್ದಾರೆ. ಹಳೇ ಆಸ್ಪತ್ರೆಯಲ್ಲಿ ಹೊರ ರ‍್ಯಾಂಪ್ ನಿರ್ಮಿಸಬೇಕಿದೆ. ವಾಟರ್ ಟ್ಯಾಂಕ್ ನಿರ್ಮಾಣವೂ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳ ಪ್ಲಾನನ್ನು ತಂದು ತೋರಿಸಿ ಅನುಮೋದನೆ ಪಡೆದು ಕಾಮಗಾರಿ ಕೈಗೊಳ್ಳಲು ಜಿಲ್ಲಾ ಸರ್ಜನ್‌ಗೆ ತಿಳಿಸಿದರು.

ಈ ವರ್ಷ ಜಿಲ್ಲೆ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ 16 ರಿಂದ 23 ನೇ ಸ್ಥಾನಕ್ಕಿಳಿದಿದ್ದು ಫಲಿತಾಂಶ ಸುಧಾರಣೆಗಾಗಿ ಕ್ರಮ ಕೈಗೊಳ್ಳಬೇಕಾಗಿದೆ. ಜಿಲ್ಲೆಯಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳ ಭರ್ತಿಗೆ ಮತ್ತು ಶಾಲೆಗಳಲ್ಲಿ ಮೂಲಭೂತ ಸೌಕರ್ಯ ಕಲ್ಪಿಸಲು ಸರ್ಕಾರದ ಮಟ್ಟದಲ್ಲಿ ಗಮನ ಸೆಳೆಯುವಂತಹ ವಿಷಯಗಳಿದ್ದಲ್ಲಿ, ಆಯಾ ಕ್ಷೇತ್ರದ ಶಾಸಕರ ಗಮನಕ್ಕೆ ತರಬೇಕು ಮತ್ತು ಶೈಕ್ಷಣಿಕ ಗುಣಮಟ್ಟ ಉತ್ತಮಪಡಿಸಲು ಯೋಜನೆ ರೂಪಿಸಿ, ಅನುಷ್ಠಾನ ಮಾಡಲು ಉಪನಿರ್ದೇಶಕರಿಗೆ ಸೂಚನೆ ನೀಡಿ, ಶಿಕ್ಷಣ ಇಲಾಖೆ ಆಯುಕ್ತಾಲಯಕ್ಕೆ ನಡೆಸಲಾದ ಪತ್ರ ವ್ಯವಹಾರದ ಪ್ರತಿಯನ್ನು ಶಾಸಕರುಗಳಿಗೆ ನೀಡಲು ತಿಳಿಸಿದರು.

ಪ್ರಸ್ತಕ ಸಾಲಿನ ಮುಂಗಾರು ಹಂಗಾಮಿನಲ್ಲಿ ಉತ್ತಮ ಮಳೆಯಾಗುತ್ತಿದ್ದು, ಕೃಷಿ ಚಟುವಟಿಕೆಗಳು (4ನೇ ಪುಟಕ್ಕೆ)



## ಅಧಿಕಾರಿಗಳ ನಡೆಗೆ ಶಾಸಕರ ಅಸಮಾಧಾನ

### ಸಭೆಯಿಂದ ಎದ್ದು ಹೊರಟ ದೇವೇಂದ್ರಪ್ಪ, ಕೈ ಹಿಡಿದು ಕೂರಿಸಿದ ಶಾಂತನಗೌಡ

ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದ್ದ ಮೊದಲನೇ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯ ಆರಂಭದಲ್ಲಿಯೇ ಶಾಸಕರು ಅಧಿಕಾರಿಗಳ ವಿರುದ್ಧ ತೀವ್ರ ಅಸಮಾಧಾನ ಹೊರ ಹಾಕಿದರು.

ಜಗಳೂರು ಶಾಸಕ ಬಿ.ದೇವೇಂದ್ರಪ್ಪ ಅಧಿಕಾರಿಗಳ ನಡೆ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿ, ಸಭೆಯಿಂದ ಹೊರಹೋಗುವುದಾಗಿ ಹೇಳಿ ಎದ್ದು ನಿಂತರು.

ಈ ವೇಳೆ ಹೊನ್ನಾಳಿ ಶಾಸಕ ಡಿ.ಜಿ. ಶಾಂತನಗೌಡ ಅವರು ದೇವೇಂದ್ರಪ್ಪ ಅವರ ಕೈ ಹಿಡಿದು ಸಮಾಧಾನ ಮಾಡಿ ಮತ್ತೆ ಕೂರಿಸಿದರು. ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಸಹ ಸಭೆಯಿಂದ ಹೊರ ಹೋಗದಂತೆ ಹೇಳುತ್ತಾ, ಯಾವ ಅಧಿಕಾರಿ ಅಗೌರವ ತೋರಿಸುತ್ತಾರೆ ಹೇಳಿ ಕ್ರಮ ಕೈಗೊಳ್ಳೋಣ ಎಂದರು.

ನಾನೂ ಸಹ 2 ಲಕ್ಷ ಮತಗಳನ್ನು ಪಡೆದು ಗೆದ್ದು ಬಂದಿದ್ದೇನೆ. ನಮ್ಮ ಮೇಲೂ ಜವಾಬ್ದಾರಿ ಇರುತ್ತದೆ. ನಮ್ಮದು ಅತಿ ಹಿಂದುಳಿದ ತಾಲ್ಲೂಕು. ಸಾಕಷ್ಟು ಅಭಿವೃದ್ಧಿಯಾಗಬೇಕಿದೆ. ಆದರೆ ಅಧಿಕಾರಿಗಳು ಮಾತು ಕೇಳುವುದಿಲ್ಲ ಎಂದು ಶಾಸಕ ದೇವೇಂದ್ರಪ್ಪ ಸಚಿವರ ಎದುರು ದೂರಿದರು.

ಜಿಲ್ಲಾಧಿಕಾರಿಗಳು ಸೇರಿದಂತೆ ಇಲಾಖೆಯ ಅಧಿಕಾರಿಗಳು ಸೌಜನ್ಯಕ್ಕಾದರೂ ನನ್ನನ್ನು ಭೇಟಿಯಾಗುವುದಿಲ್ಲ. ಇತ್ತೀಚೆಗೆ ಜಿಲ್ಲಾಧಿಕಾರಿಗಳು ಜಗಳೂರಿಗೆ ಬಂದಿದ್ದರೂ ನನ್ನನ್ನು ಭೇಟಿ ಮಾಡಿಲ್ಲ. (4ನೇ ಪುಟಕ್ಕೆ)

## ಪಶುಸಂಗೋಪನಾ ಅಧಿಕಾರಿಗೆ ವಿಪ ಸದಸ್ಯ ಭೋಜೇಗೌಡ ತರಾಟೆಗೆ

ಮುಂದಿನ 23 ವಾರಗಳವರೆಗೆ ಜಾನುವಾರುಗಳಿಗೆ ಆಗುವ ಮೇವು ಲಭ್ಯವಿರುವುದಾಗಿ ಹೇಳಿ, ಮತ್ತೆ ಮೇವಿನ ಲಭ್ಯತೆ ನಿರೀಕ್ಷಿಸಲಾಗಿದೆ ಎಂದು ವರದಿಯಲ್ಲಿ ತಿಳಿಸಿರುವ ಕುರಿತು ಪಶು ಸಂಗೋಪನಾ ಇಲಾಖೆ ಅಧಿಕಾರಿಯನ್ನು ವಿಧಾನ ಪರಿಷತ್ ಸದಸ್ಯ ಭೋಜೇಗೌಡ ತೀವ್ರವಾಗಿ ತರಾಟೆಗೆ ತೆಗೆದುಕೊಂಡರು. ಅನುಪಾಲನವಾ ವರದಿಯಲ್ಲಿ ನಿರೀಕ್ಷೆ ಎಂಬ ಪದಗಳು ಬರಬಾರದು. ಸಮರ್ಪಕ ಮಾಹಿತಿಯೊಂದಿಗೆ ಸಭೆಗೆ ಬನ್ನಿ ಎಂದರು.

## ಸೋಮವಾರ ಭದ್ರೆಗೆ ಬಾಗಿನ: ಎಸ್ಸೆಸ್ಸೆಂ

ಬರುವ ಸೋಮವಾರ ಭದ್ರಾ ಜಲಾಶಯಕ್ಕೆ ಬಾಗಿನ ಅರ್ಪಿಸಲಾಗುವುದು. ಜಿಲ್ಲೆಯ ಎಲ್ಲಾ ಶಾಸಕರು ಈ ವೇಳೆ ಪಾಲ್ಗೊಳ್ಳಲಿದ್ದಾರೆ ಎಂದು ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹೇಳಿದರು.



**ಭದ್ರೆಗೆ ಬಾಗಿನ**

ದಾವಣಗೆರೆ,ಜು.30-ಭರ್ತಿಯಾಗಿರುವ ಭದ್ರಾ ಜಲಾಶಯಕ್ಕೆ ಕೇಂದ್ರದ ಮಾಜಿ ಸಚಿವ ಜಿ.ಎಂ. ಸಿದ್ದೇಶ್ವರ ಅವರ ನೇತೃತ್ವದಲ್ಲಿ ದಾವಣಗೆರೆ (4ನೇ ಪುಟಕ್ಕೆ)









**ಸೈಟ್ ಮಾರಾಟಕ್ಕೆ (KHB)**
ಕರ್ನಾಟಕ ಗೃಹ ಮಂಡಳಿ (ಲೊಕೇಶನ್ ಚೆನ್ನಾಗಿ ಇದೆ) 40x60 ದಕ್ಷಿಣ (61 ಲಕ್ಷ) 40x60 ಪಶ್ಚಿಮ (62 ಲಕ್ಷ)
ಕಿರಣ್ ಬೂಸ್ನೂರ್ (ಏಜೆಂಟ್)
97315 63409
ನೇರವಾಗಿ ರಿಜಿಸ್ಟರ್ ಪಾರ್ಟಿ ವ್ಯಾಪಾರ (1/2%) ಅರ್ಧ ಪರ್ಸೆಂಟ್ ಕಮೀಷನ್ ನನ್ನದು

**ಸೈಟುಗಳು ಮಾರಾಟಕ್ಕಿವೆ**
ಹೊಸ ಕುಂದುವಾಡ ಹತ್ತಿರ ಸರ್ಕಾರಿ ನೌಕರರ ಬಡಾವಣೆ ಸುತ್ತಮುತ್ತ ಹೊಸ ಬಡಾವಣೆಗಳಲ್ಲಿ 30x40 ಪಶ್ಚಿಮ-ದಕ್ಷಿಣ ಕಾರ್ನರ್, 30x40 ಪಶ್ಚಿಮ, 30x40 ಪೂರ್ವ, 30x50 ಪೂರ್ವ, 30x50 ಉತ್ತರ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟುಗಳು ಮಾರಾಟಕ್ಕಿವೆ**
ಹದಡಿ ರಸ್ತೆ, ಶಿರಮಗೊಂಡನಹಳ್ಳಿ ಸುತ್ತಮುತ್ತ ಹೊಸ ಬಡಾವಣೆಗಳಲ್ಲಿ 30x46 ಪಶ್ಚಿಮ ಅಕ್ಕ-ಪಕ್ಕ, 30x45 ಪೂರ್ವ ಅಕ್ಕ-ಪಕ್ಕ, 30x40 ಪಶ್ಚಿಮ, 30x50 ಪೂರ್ವ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**Property Hub**
- EC
- E-swathu
- Building Licence
- Khatha Change

96118 66449

**ಸೈಟುಗಳು ಮಾರಾಟಕ್ಕಿವೆ**
ವಾಜಪೇಯಿ ಲೇಔಟ್ ಪಕ್ಕ ಗೀತಂ ಕಾಲೇಜು ಸುತ್ತ-ಮುತ್ತ ಹೊಸ ಬಡಾವಣೆಗಳಲ್ಲಿ 30x35 ಉತ್ತರ-ಪಶ್ಚಿಮ ಕಾರ್ನರ್, 60 ಅಡಿ ರಸ್ತೆಗೆ ಹೊಂದಿಕೊಂಡು 28x30 ಪಶ್ಚಿಮ ಅಕ್ಕ-ಪಕ್ಕ, 30x40 ಪೂರ್ವ, 30x40 ದಕ್ಷಿಣ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481 59303, 80509 52637

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ ನರ್ಸ್ (Nurse) ಬೇಕಾಗಿದ್ದಾರೆ. ವಸತಿ ಸೌಲಭ್ಯವಿರುತ್ತದೆ.
ಸಂಪರ್ಕಿಸಿ : ಸಿ.ಜಿ.ಆಸ್ಪತ್ರೆ ಹಿಂಭಾಗ, ಪೆವಿಲಿಯನ್ ರಸ್ತೆ, ಪಿ.ಜೆ.ಬಡಾವಣೆ, ದಾವಣಗೆರೆ.
98450-35710, 77607-39990

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ.
ಸ್ಥಳ : ದೊಡ್ಡಬಾತಿ
88920 08800

**ವಿಲ್ಲಾ ಸೈಟುಗಳು ಮಾರಾಟಕ್ಕಿವೆ**
ವಿಲ್ಲಾ ಸೈಟುಗಳು, ಫಾರ್ಮ್‌ಹೌಸ್ ಸೈಟುಗಳು ಅತ್ಯಂತ ಕಡಿಮೆ ದರದಲ್ಲಿ ಮಾರಾಟಕ್ಕಿವೆ. 500/- sq.ft ಮಾತ್ರ, ಹರಪನಹಳ್ಳಿ ರಸ್ತೆ, ಮಾಗಾನಹಳ್ಳಿ ಹತ್ತಿರ, ದಾವಣಗೆರೆಯಿಂದ 5 ಕಿ.ಮೀ. ದೂರ.
9591974763, 7892568692

**ಪುರುಷ ಅಭ್ಯರ್ಥಿಗಳು ಕೆಲಸಕ್ಕೆ ಬೇಕಾಗಿದ್ದಾರೆ**
ಕಛೇರಿಯಲ್ಲಿ ಕೆಲಸ ನಿರ್ವಹಿಸಲು ಕಂಪ್ಯೂಟರ್‌ನಲ್ಲಿ ಎಂ.ಎಸ್.ಆಫೀಸ್ ಹಾಗೂ ಫೋಟೋ-ಷಾಪ್‌ನಲ್ಲಿ ಅನುಭವವುಳ್ಳವರು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ.
ಶ್ರೀ ರೇಣುಕಾದೇವಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಂಸ್ಥೆ (ರಿ)
ಹೆಚ್.ಡಿ.ಎಫ್.ಸಿ. ಬ್ಯಾಂಕ್ ಪಕ್ಕ, 2ನೇ ಮಹಡಿ, ಹೆಚ್.ಎಂ. ರಸ್ತೆ, ದಾವಣಗೆರೆ-1.
94483 38657

**ಬೇಕಾಗಿದ್ದಾರೆ**
ದಾವಣಗೆರೆಯ ಶುದ್ಧ ಸಸ್ಯಹಾರಿ ರೆಸ್ಟೋರೆಂಟ್‌ನಲ್ಲಿ ತಂದೂರಿ ಕುಕ್, ಚೈನೀಸ್ ಕುಕ್ ಮತ್ತು ವೇಟರ್ಸ್ ಇಬ್ಬರು ಕೆಲಸಕ್ಕೆ ಬೇಕಾಗಿದ್ದಾರೆ.
ಸಂಪರ್ಕಿಸಿ :
70224 60137, 90192 42525

**TUITIONS**
IGCSE, ICSE, CBSE and State Board from Class 5th to 12th MCC `A' Block
98444 92888

**ಸಾಲ ಸೌಲಭ್ಯ**
ಸೈಟು ಖರೀದಿ, ಮನೆ ಖರೀದಿ, ಮನೆ ನಿರ್ಮಿಸಲು, E-ಸ್ವತ್ತು ಹೊಂದಿರುವ ನಿವೇಶನಗಳಿಗೆ ಸಾಲ ಸೌಲಭ್ಯ ನೀಡಲಾಗುವುದು. ಆಸಕ್ತರು ಸಂಪರ್ಕಿಸಿ :
+91 86184 85306
+91 79752 85686

**WANTED**
Boys required for sales executive job at Food Mart Supermarket.
Quli : Any Degree.
98864 63531

**ಶಿಕ್ಷಕಿಯರು ಬೇಕಾಗಿದ್ದಾರೆ**
B.A., B.Com., NTC., BSc., TCH., (D.Ed), B.Ed.,
ಮಹಮ್ಮಡನ್ ಕಾನ್ವೆಂಟ್
ಮಣಿಕಂಠ ಸರ್ಕಲ್, ನಿಟುವಳ್ಳಿ, ದಾವಣಗೆರೆ.
9341119195, 9980032237
ತಹಸೀನ್ ಕಾನ್ವೆಂಟ್
ರಝಾ-ಉಲ್-ಮುಸ್ತಫ್ ನಗರ, 1ನೇ ಮೇನ್ 1ನೇ ಕ್ರಾಸ್, ದಾವಣಗೆರೆ.
9341119195, 9980032237

**ಬೇಕಾಗಿದ್ದಾರೆ**
Tally ಅನುಭವ ಇರುವ ಹುಡುಗಿಯರು ಕೆಲಸಕ್ಕೆ ಬೇಕಾಗಿದ್ದಾರೆ. ಕಿಸಾನ್ ವರ್ಲ್ಡ್ ಹದಡಿ ರೋಡ್, ದಾವಣಗೆರೆ
99642 12379

**ವಾಟರ್ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಬೇಕಾಗಿದ್ದಾರೆ**
ಕಾಫಿ ಶಾಪ್‌ನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ. ಆಸಕ್ತಿಯುಳ್ಳವರು ಸೂಕ್ತ ದಾಖಲೆಗಳೊಂದಿಗೆ ನೇರವಾಗಿ ಸಂಪರ್ಕಿಸಿ.
ಪುರುಷ ಅಭ್ಯರ್ಥಿಗಳು ಮಾತ್ರ ಸಂಪರ್ಕಿಸಿ
ಎ.ಎನ್.ಎಸ್. ಫುಡ್ಸ್
ಮಂಡಿಪೇಟೆ, ದಾವಣಗೆರೆ.
94482 72734

**ಸೈಟುಗಳು ಅತ್ಯಂತ ಕಡಿಮೆ ದರದಲ್ಲಿ ಮಾರಾಟಕ್ಕಿವೆ**
850/- sq.ft ಮಾತ್ರ, ಅಂತಿಮ ಅನುಮೋದನೆಯಾದ ಲೇಔಟ್, ಮಾಗಾನಹಳ್ಳಿ ರಸ್ತೆ, ಅಮೃತ ನಗರ ಹತ್ತಿರ, ದಾವಣಗೆರೆಯಿಂದ 4 ಕಿ.ಮೀ. ದೂರ.
9591974736, 7892568692

**ಮನೆ ಬಾಡಿಗೆಗೆ**
2BHK-1st / 2nd Floor, 3ನೇ ಮೇನ್, 16ನೇ ಕ್ರಾಸ್, ಕೆಟಿಜೆ ನಗರ, ದಾವಣಗೆರೆ. 1BHK-1st Floor, 1ನೇ ಮೇನ್, 4ನೇ ಕ್ರಾಸ್, ಪ್ರಶಾಂತ್ ನಗರ, ಹರಿಹರ.
91774 21966

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**TUITIONS PCMB/CS**
5th Std to 10th Std Science, Maths
ಸಮೃದ್ಧಿ ಅಕಾಡೆಮಿ
96202 62361

**ಮಾನ್ಯ 2ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಹಿರಿಯ ವಿಭಾಗ, ದಾವಣಗೆರೆ**

**ಅಸಲು ದಾವೆ ನಂಬರ್, 315/2021**

**ವಾದಿಗಳು :** ಶ್ರೀಮತಿ ವಿನೋದಮ್ಮ,

**ಪ್ರತಿವಾದಿಗಳು :** ಶ್ರೀಮತಿ ಸಿದ್ದಮ್ಮ ಮತ್ತು ಇತರರು.

ದಿವಾಣಿ ಪ್ರಕ್ರಿಯೆ ಸಂಹಿತೆಯ ಆದೇಶ 5, ನಿಯಮ 20 ರಡಿಯಲ್ಲಿ ಹೊರಡಿಸಿದ ನೋಟೀಸು, ಪ್ರತಿವಾದಿ ನಂ. 1 (ಎ) : ಶ್ರೀಮತಿ ನಾಗರತ್ನಮ್ಮ ಗಂಡ ಕೃಷ್ಣಪ್ಪ 40 ವರ್ಷ ವಯಸ್ಸು, ಮನೆ ಕೆಲಸ, ಮಾಯಕೊಂಡ ವಾಸ ದಾವಣಗೆರೆ ತಾಲ್ಲೂಕು, ಪ್ರತಿವಾದಿ ನಂ. 1 (ಸಿ) : ನಾಗರಾಜ ತಂದೆ ಲೇಟ್ ಕನಕಪ್ಪ ವಯಸ್ಸು 45 ವರ್ಷ, ವ್ಯವಸಾಯ, ಕರೇನಹಳ್ಳಿ ವಾಸ, ಆನಗೋಡು ಹೋಬಳಿ, ದಾವಣಗೆರೆ ತಾಲ್ಲೂಕು. ಪ್ರತಿವಾದಿ : ನಂ. 1 (ಡಿ) : ಸ್ವಾಮಿ ತಂದೆ ಕನಕಪ್ಪ ವಯಸ್ಸು 36 ವರ್ಷ, ವ್ಯವಸಾಯ, ಶಾಮನೂರು ವಾಸ, ದಾವಣಗೆರೆ ತಾಲ್ಲೂಕು.

**ವಾದಿಗಳು ತಮ್ಮ ಹಾಗೂ ಇತರೆ ಪ್ರತಿವಾದಿಗಳ ವಿರುದ್ಧ ಮಾನ್ಯ 2ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ, ಹಿರಿಯ ವಿಭಾಗ,**

ದಾವಣಗೆರೆಯಲ್ಲಿ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಪಾಲು ವಿಭಾಗ ಕೋರಿ ದಾವೆಯನ್ನು ಸಲ್ಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ಈಗಾಗಲೇ ತಮಗೆ ನ್ಯಾಯಾಲಯದ ಮೂಲಕ ಮತ್ತು ಅಂಚೆಯ ಮೂಲಕ ನೋಟಿಸು ಕಳುಹಿಸಿದರೂ ಸಹ ಜಾರಿಯಾಗಿರುವುದಿಲ್ಲ. ಆದ್ದರಿಂದ ಸದರಿ ಪ್ರಕರಣವು ದಿನಾಂಕ 6.8.2024 ರಂದು ನಿಮ್ಮ ಹಾಜರಾತಿಗಾಗಿ ಇರುತ್ತದೆ. ಆದ್ದರಿಂದ ಸದರಿ ದಿನಾಂಕದಂದು ನ್ಯಾಯಾಲಯಕ್ಕೆ ಬೆಳಿಗ್ಗೆ 11 ಗಂಟೆಗೆ ನೀವಾಗಲಿ ಅಥವಾ ನಿಮ್ಮ ಪರ ವಕೀಲರ ಮುಖಾಂತರವಾಗಲೀ ಹಾಜರಾಗತಕ್ಕದ್ದು. ಒಂದೊಮ್ಮೆ ಹಾಜರಾಗಲು ತಪ್ಪದಲ್ಲಿ ನಿಮ್ಮಗಳ ಗೈರು ಹಾಜರಿಯಲ್ಲಿ ವಿಚಾರಣೆಯನ್ನು ಮುಂದುವರಿಸಲಾಗುತ್ತದೆ.

ಈ ದಿವಸ 25ನೇ ತಾರೀಖು ಜೂನ್ ಮಾಹೆ 2024 ನೇ ಇಸವಿಯಂದು ನ್ಯಾಯಾಲಯದ ಮೊಹರು ಮತ್ತು ಸಹಿಯೊಂದಿಗೆ ನೀಡಲಾಗುವುದು.

| | |
|---|---|
| ಎನ್. ಶಿವಲಿಂಗಪ್ಪ | ನ್ಯಾಯಾಲಯದ ಆದೇಶದ ಮೇರೆಗೆ |
| ವಾದಿಗಳ ಪರ | ಶಿರಸ್ತೇದಾರರು |
| ವಕೀಲರು | ಹಿರಿಯ ಸಿವಿಲ್ ನ್ಯಾಯಾಲಯ |
| ದಾವಣಗೆರೆ | ಹಿರಿಯ ವಿಭಾಗ, ದಾವಣಗೆರೆ |

# ಭೀಕರ ಭೂಕುಸಿತ, ಪ್ರವಾಹದಲ್ಲಿ 123 ಸಾವು, ಹಲವರಿಗೆ ಗಾಯ



ವಯನಾಡ್, ಜು. 30 - ಕೇರಳದಲ್ಲಿ ಸಂಭವಿಸಿದ ಅತ್ಯಂತ ಭೀಕರ ಭೂಕುಸಿತದಲ್ಲಿ ಕನಿಷ್ಠ 123 ಜನ ಸಾವನ್ನಪ್ಪಿದ್ದಾರೆ ಹಾಗೂ 128 ಜನ ಗಾಯಗೊಂಡಿದ್ದಾರೆ. ವಯನಾಡ್‌ನಲ್ಲಿ ಧಾರಾಕಾರ ಮಳೆಯಿಂದಾಗಿ ಭೂಕುಸಿತ ಉಂಟಾಗಿದ್ದು ಹಲವರು ಅವಶೇಷಗಳಡಿ ಸಿಲುಕಿರುವ ಕಳವಳ ಇದೆ.

ನೆರವಿಗಾಗಿ ಕಾರ್ಯಾಚರಣೆ ಆರಂಭಿಸಲಾಗಿದ್ದು ಮೃತರ ಸಂಖ್ಯೆ ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇದೆ.

ತಮ್ಮ ಮನೆಗಳಲ್ಲಿ ಹಾಗೂ ಹೊರಬರಲು ಸಾಧ್ಯವಾಗದಂತಹ ಜಾಗಗಳಲ್ಲಿ ಸಿಲುಕಿದ ಜನರು ದೂರವಾಣಿ ಮೂಲಕ ನೆರವಿಗೆ ಮೊರೆಯಿಡುವ ಹೃದಯವಿದ್ರಾವಕ ದೃಶ್ಯಗಳು ಕಂಡುಬಂದಿವೆ.

ಭೂಕುಸಿತದಿಂದಾಗಿ ಮುಂಡಕ್ಕಾಯಿ, ಚೂರಲ್ಮಲ, ಅಟ್ಟಮಲ ಹಾಗೂ ನೂಲ್ಪುಳಗಳಲ್ಲಿ ಸಾವು ನೋವುಗಳು ಸಂಭವಿಸಿದೆ.

ಈ ಬಗ್ಗೆ ಮಾತನಾಡಿರುವ ಮುಖ್ಯಮಂತ್ರಿ ಪೀಣರಾಯಿ ವಿಜಯನ್, ತೀವ್ರ ಮಳೆ ಹಾಗೂ ಭೂಕುಸಿತದಿಂದ ಇಡೀ ಪ್ರದೇಶ ನಾಶವಾಗಿದೆ. ಪ್ರವಾಹದ ನೀರಿನಲ್ಲಿ ಹಲವರು ಕೊಚ್ಚಿ ಹೋಗಿದ್ದಾರೆ. ಚಲಿಯಾರ್ ನದಿಯಲ್ಲಿ 16 ಮೃತ ದೇಹಗಳು ಪತ್ತೆಯಾಗಿವೆ ಎಂದು ಹೇಳಿದರು.

ಇದು ರಾಜ್ಯ ಕಂಡ ಅತ್ಯಂತ ತೀವ್ರ ಸ್ವರೂಪದ ನೈಸರ್ಗಿಕ ವಿಕೋಪಗಳಲ್ಲಿ ಒಂದಾಗಿದೆ. ಇದುವರೆಗೂ 34 ಮೃತದೇಹಗಳ ಗುರುತು ಪತ್ತೆ ಮಾಡಲಾಗಿದೆ ಹಾಗೂ 18 ಮೃತ ದೇಹಗಳನ್ನು ಕುಟುಂಬದವರಿಗೆ ನೀಡಲಾಗಿದೆ ಮುಖ್ಯಮಂತ್ರಿ ಹೇಳಿದ್ದಾರೆ.

ಜಿಲ್ಲೆಯಲ್ಲಿ 3 ಸಾವಿರ ಜನರನ್ನು ಸ್ಥಳಾಂತರಿಸಲಾಗಿದೆ. ಇವರಿಗಾಗಿ 45 ಕಾಳಜಿ ಕೇಂದ್ರಗಳನ್ನು ತೆರೆಯಲಾಗಿದೆ ವಿಜಯನ್ ಹೇಳಿದ್ದಾರೆ.

ಬೆಳಗಿನ ಜಾವ 2 ಗಂಟೆ ಸಮಯದಲ್ಲಿ ಮೊದಲ ಭೂಕುಸಿತ ಸಂಭವಿಸಿತ್ತು. ನಂತರ 4.10 ರ ಸಮಯದಲ್ಲಿ ಮತ್ತೊಂದು ಭೂಕುಸಿತ ಉಂಟಾಗಿದೆ.

ಮೆಪ್ಪಾಡಿ, ಮುಂಡಕ್ಕಾಯಿ ಹಾಗೂ ಚೂರಲ್ಮಲ ಪ್ರದೇಶಗಳ ಸಂಪರ್ಕ ಕಡಿತವಾಗಿದೆ. ವೆಲ್ಲರಿಮಲ ಜಿ.ಹೆಚ್.ಎಸ್.ಎಸ್. ಶಾಲೆ ಸಂಪೂರ್ಣವಾಗಿ ಭೂಮಿಯಲ್ಲಿ ಹುದುಗಿದೆ. ಇರುವಳಿಂಜಿಪುಳ ನದಿ ಎರಡು ಭಾಗಗಳಾಗಿ ಒಡೆದಿದೆ ಎಂದವರು ಹೇಳಿದರು.

ಹಲವರು ಮಣ್ಣಿನಲ್ಲಿ ಸಿಲುಕಿದ್ದರೆ, ಇನ್ನೂ ಹಲವರು ಪ್ರವಾಹದ ನೀರಲ್ಲಿ ಕೊಚ್ಚಿ ಹೋಗಿದ್ದಾರೆ. ಅವರನ್ನು ಹುಡುಕುವ ಪ್ರಯತ್ನ ಮುಂದುವರೆದಿದೆ. ಸಾಧ್ಯವಿರುವ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ ಎಂದು ವಿಜಯನ್ ಹೇಳಿದ್ದಾರೆ.

ಸೈನ್ಯ, ನೌಕಾದಳ ಹಾಗೂ ಎನ್.ಡಿ.ಆರ್.ಎಫ್. ಸಿಬ್ಬಂದಿ ಕಠಿಣ ಹವಾಮಾನದ ನಡುವೆಯೂ ಬದುಕುಳಿದವರ ಶೋಧಿಸುವ ಕಾರ್ಯದಲ್ಲಿ ತೊಡಗಿವೆ.

## ಸಮುದ್ರ ಬಿಸಿಯಾಗಿ ಕೇರಳದಲ್ಲಿ ಭೂಕುಸಿತ

ನವದೆಹಲಿ, ಜು. 30 - ಅರಬ್ಬಿ ಸಮುದ್ರ ಬಿಸಿಯಾಗಿರುವ ಕಾರಣದಿಂದ ಆಳವಾದ ಮೋಡಗಳ ವ್ಯವಸ್ಥೆ ರೂಪುಗೊಂಡಿದ್ದು, ಕೇರಳದಲ್ಲಿ ಅಲ್ಪ ಅವಧಿಯಲ್ಲೇ ಹೆಚ್ಚು ಮಳೆಯಾಗುತ್ತಿದೆ. ಇದು ಭೂಕುಸಿತದ ಅಪಾಯ ಹೆಚ್ಚಿಸಿದೆ ಎಂದು ಹಿರಿಯ ಪರಿಸರ ವಿಜ್ಞಾನಿಯೊಬ್ಬರು ಹೇಳಿದ್ದಾರೆ. ಭಾರೀ ಮಳೆಯ ಕಾರಣದಿಂದ ಕೇರಳದ ವಯನಾಡು ಜಿಲ್ಲೆಯ ಬೆಟ್ಟ ಪ್ರದೇಶಗಳಲ್ಲಿ ಸರಣಿ ಭೂಕುಸಿತ ಸಂಭವಿಸಿದೆ.



ಈ ಬಗ್ಗೆ ಮಾತನಾಡಿರುವ ಸಿ.ಯು.ಎಸ್.ಎ.ಟಿ. ಸಂಸ್ಥೆಯ ನಿರ್ದೇಶಕ ಎಸ್. ಅಭಿಲಾಶ್, ಕಾಸರಗೋಡು, ಕಣ್ಣೂರು, ವಯನಾಡು, ಕ್ಯಾಲಿಕಟ್ ಹಾಗೂ ಮಲ್ಲಪುರಂ ಜಿಲ್ಲೆಗಳಲ್ಲಿ ಕಳೆದ ಎರಡು ವಾರಗಳಿಂದ ಧಾರಾಕಾರ ಮಳೆ ಯಾಗುತ್ತಿದೆ ಎಂದಿದ್ದಾರೆ. ಮಳೆಯಿಂದಾಗಿ ಮಣ್ಣು ಸಾಕಷ್ಟು ಹಸಿಯಾಗಿದೆ. ಅರಬ್ಬಿ ಸಮುದ್ರದಲ್ಲಿ ಆಳವಾದ ಮೋಡಗಳ ರಚನೆ ಆಗಿರುವುದರಿಂದ ಮಳೆ ಹೆಚ್ಚಾಗಿದೆ. 2019ರಲ್ಲಿ ಕೇರಳ ಪ್ರವಾಹಕ್ಕೆ ಕಾರಣವಾದಂತಹ ಗಟ್ಟಿ ಮೋಡಗಳೇ ಈ ಬಾರಿಯೂ ಕಂಡು ಬಂದಿವೆ ಎಂದು ಅಭಿಲಾಶ್ ತಿಳಿಸಿದ್ದಾರೆ. ಈ ರೀತಿಯ ಮೋಡಗಳ ರಚನೆ ಕೊಂಕಣದ ಉತ್ತರ ಹಾಗೂ ಉತ್ತರ ಮಂಗಳೂರಿನಲ್ಲಿ ಹೆಚ್ಚು ಸಾಮಾನ್ಯವಾಗಿತ್ತು. ಪರಿಸರ ಬದಲಾವಣೆ ಕಾರಣದಿಂದ ದಕ್ಷಿಣದಲ್ಲೂ ಇದೇ ರೀತಿಯ ಮೋಡಗಳು ಬರುತ್ತಿವೆ ಎಂದವರು ಹೇಳಿದ್ದಾರೆ. ತ್ರಿಸ್ಸೂರು, ಪಾಲಕ್ಕಾಡ್, ಕೋಳಿಕೋಡ್, ವಯನಾಡ್, ಕಣ್ಣೂರು, ಮಲ್ಲಪುರಂ ಹಾಗೂ ಎರ್ನಾಕುಲಂ ಜಿಲ್ಲೆಗಳಲ್ಲಿ ಇಪ್ಪತ್ನಾಲ್ಕು ಗಂಟೆಗಳಲ್ಲಿ 19 ರಿಂದ 35 ಸೆಂ.ಮೀ. ಮಳೆಯಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಮುಂದಿನ ಎರಡು ದಿನಗಳ ಕಾಲವೂ ರಾಜ್ಯದ ಹಲವೆಡೆ ಅತಿ ಭಾರೀ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ವರದಿಯಲ್ಲಿ ತಿಳಿಸಲಾಗಿದೆ.

# ಜಿಲ್ಲಾಸ್ಪತ್ರೆ ಅಭಿವೃದ್ಧಿ ಕಾರ್ಯ ಚುರುಕುಗೊಳಿಸಿ



(3ನೇ ಪುಟದಿಂದ) ಗರಿಗೆದರಿವೆ. ಜಿಲ್ಲೆಯ ರೈತರ ಜೀವನಾಡಿ ಭದ್ರಾ ಜಲಾಶಯ ಭರ್ತಿ ಹಂತಕ್ಕೆ ತಲುಪಿದ್ದು ರೈತರಲ್ಲಿ ಆಶಾ ಭಾವನೆಯನ್ನು ಮೂಡಿಸಿದ್ದು, ರೈತರಿಗೆ ಬಿತ್ತನೆ ಬೀಜ, ರಸಗೊಬ್ಬರದ ಕೊರತೆಯಾಗದಂತೆ ನೋಡಿಕೊಳ್ಳಲು ಅಧಿಕಾರಿಗಳಿಗೆ ಸಚಿವರು ಸೂಚಿಸಿದರು.

ಯಾವುದೇ ಅಧಿಕಾರಿಗಳು ಜಿಲ್ಲೆಗೆ ಹೊಸದಾಗಿ ಬಂದಾಗ ಸಂಬಂಧಿಸಿದ ಶಾಸಕರನ್ನು ಸಂಪರ್ಕಿಸಿ ಆಯಾ ಕ್ಷೇತ್ರದಲ್ಲಿ ನಡೆಯುತ್ತಿರುವ ಅಭಿವೃದ್ದಿ ಕಾಮಗಾರಿಗಳು, ಸರ್ಕಾರದ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡುವ ಮೂಲಕ ಕಾಮಗಾರಿಗಳನ್ನು ಅನುಷ್ಠಾನ ಮಾಡುವಾಗ ಶಾಸಕರ ಗಮನಕ್ಕೆ ತರಬೇಕು ಮತ್ತು ಇದರ ಶಂಕುಸ್ಥಾಪನೆ, ಉದ್ಘಾಟನೆಯನ್ನು ಕೈಗೊಳ್ಳುವಾಗ ಇವರನ್ನು ಆಹ್ವಾನಿಸಬೇಕು ಮತ್ತು ಪ್ರಗತಿ ಪರಿಶೀಲನಾ ಸಭೆಗಳನ್ನು ನಡೆಸುವಾಗಲೂ ಮಾಹಿತಿ ನೀಡಬೇಕು, ಈ ಬಗ್ಗೆ ಜಿಲ್ಲಾಧಿಕಾರಿಗಳು ಎಲ್ಲಾ ಅಧಿಕಾರಿಗಳ ಸಭೆ ನಡೆಸಿ ನಿರ್ದೇಶನ ನೀಡಲು ಸೂಚನೆ ನೀಡಿದರು.

ಸಭೆಯಲ್ಲಿ ಜಗಳೂರು ಶಾಸಕ ಬಿ.ದೇವೇಂದ್ರಪ್ಪ, ಮಾಯಕೊಂಡ ಶಾಸಕ ಕೆ.ಎಸ್.ಬಸವಂತಪ್ಪ, ಹೊನ್ನಾಳಿ ಶಾಸಕ ಡಿ.ಜಿ.ಶಾಂತನಗೌಡ, ಚನ್ನಗಿರಿ ಶಾಸಕ ಬಸವರಾಜು ವಿ.ಶಿವಗಂಗಾ, ವಿಧಾನ ಪರಿಷತ್ ಸದಸ್ಯರಾದ ಎಸ್.ಎಲ್.ಭೋಜೇಗೌಡ, ಕೆ.ಎಸ್.ನವೀನ್, ಡಾ. ಧನಂಜಯ್ ಸರ್ಜಿ, ಡಿ.ಟಿ. ಶ್ರೀನಿವಾಸ್, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ಶಮ್ಲಾ ಇಕ್ಬಾಲ್, ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ.ಇಟ್ನಾಳ್, ಜಿಲ್ಲಾ ರಕ್ಷಣಾಧಿಕಾರಿ ಉಮಾ ಪ್ರಶಾಂತ್, ಡಿ.ಸಿ.ಸಿ.ಬ್ಯಾಂಕ್ ಅಧ್ಯಕ್ಷ ಕೋಗುಂಡಿ ಬಕ್ಕೇಶಪ್ಪ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಶಾಮನೂರು ಡಿ.ಬಸವರಾಜು, ಶ್ರೀಮತಿ ಶೋಭಾ ಹಾಗೂ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

# ಅಧಿಕಾರಿಗಳ ನಡೆಗೆ ಶಾಸಕರ ಅಸಮಾಧಾನ

(3ನೇ ಪುಟದಿಂದ) ಜಿಲ್ಲಾ ಮಟ್ಟದ ಅಧಿಕಾರಿಗಳು ನಮ್ಮ ಯಾವುದೇ ಕೆಲಸಗಳಿಗೆ ಸ್ಪಂದಿಸುವುದಿಲ್ಲ ಎಂದು ಆರೋಪಿಸಿದರು.

ಇದೇ ವೇಳೆ ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ ಸಹ ಅಧಿಕಾರಿಗಳ ನಡೆಯಿಂದಾಗಿ ರಾಜೀನಾಮೆ ಕೊಡಬೇಕೆನ್ನುವಷ್ಟು ಬೇಜಾರಾಗಿದೆ ಎಂದರು.

ವಿಧಾನ ಪರಿಷತ್ ಸದಸ್ಯ ಕೆ.ಎಸ್. ನವೀನ್, ಜಿಲ್ಲೆಯ ಐದು ವಿಧಾನಸಭಾ ಕ್ಷೇತ್ರಗಳು ನನ್ನ ವ್ಯಾಪ್ತಿಗೆ ಬರುತ್ತವೆ. ಇಲ್ಲಿಯವರೆಗೆ ಯಾವ ಸಭೆಯ ಬಗ್ಗೆಯೂ ನನಗೆ ಆಹ್ವಾನ ಬಂದಿಲ್ಲ ಎಂದರು. ಎಲ್ಲಾ ಅಧಿಕಾರಿಗಳ ಸಭೆ ಕರೆದು ಪ್ರೋಟೋಕಾಲ್ ನಂತೆ ಅಧಿಕಾರಿಗಳನ್ನು ಆಹ್ವಾನಿಸಲು ಸೂಚಿಸುವುದಾಗಿ ಜಿಲ್ಲಾಧಿಕಾರಿ ಹೇಳಿದರು.

ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, 'ನಿಮ್ಮ ಸರ್ಕಾರ ಇದ್ದಾಗ ಮಾಡುತ್ತಿದ್ದ ಪದ್ಧತಿ ಹಾಗೆಯೇ ಮುಂದುವರೆದಿದೆ. ಈಗ ಅದನ್ನು ನಾವು ಸರಿಪಡಿಸಬೇಕಿದೆ' ಎಂದು ನವೀನ್‌ಗೆ ಕುಟುಕಿದರು.

ಶಾಸಕರುಗಳಿಗೆ ಗೌರವ ನೀಡುವಂತೆ, ಯೋಜನೆಗಳ ಕುರಿತು ಶಾಸಕರುಗಳೊಂದಿಗೆ ಚರ್ಚಿಸುವಂತೆ ಸಚಿವ ಮಲ್ಲಿಕಾರ್ಜುನ್ ಅಧಿಕಾರಿಗಳಿಗೆ ಸೂಚಿಸಿದರು.

# ಸಭೆಯಲ್ಲಿ ಮೂವರು 'ಮೈತ್ರಿ' ವಿಪ ಸದಸ್ಯರು

## ಏನ್ ಎಲ್ಲಾ ಮಾತಾಡ್ಕಂಡು ಬಂದ್ರಾ ? ಎಂದ ಸಚಿವ ಮಲ್ಲಿಕಾರ್ಜುನ್

ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ನಡೆಯುವ ಕೆಡಿಪಿ ಸಭೆಯಲ್ಲಿ ಸಚಿವರೊಂದಿಗೆ ಶಾಸಕರು ಕುಳಿತು ಕೊಳ್ಳಲು ಅವಕಾಶವಿರಲಿಲ್ಲ. ಆದರೆ ಈ ಹಿಂದಿನ ಸಭೆಗಳಲ್ಲಿಯೂ ಈ ನಿಯಮ ಪಾಲಿಸದ ಕಾರಣ ಅದೇ ಪದ್ಧತಿ ಮುಂದುವರೆದಿತ್ತು.

ಸಚಿವರೊಟ್ಟಿಗೆ ಹೊನ್ನಾಳಿ, ಜಗಳೂರು, ಚನ್ನಗಿರಿ, ಮಾಯಕೊಂಡ ಶಾಸಕರು, ಮೂವರು ವಿಧಾನ ಪರಿಷತ್ ಸದಸ್ಯರು ಹಾಗೂ ಅಧಿಕಾರಿಗಳು ಸೇರಿದಂತೆ 13 ಗಣ್ಯರಿಗೆ ವೇದಿಕೆ ಮೇಲೆ ಆಸನ ಹೊಂದಿಸಲು ಜಿಲ್ಲಾ ಪಂಚಾಯ್ತಿ ಸಿಬ್ಬಂದಿಗಳು ಪರದಾಡಬೇಕಾಯಿತು.

ಸಭೆಯಲ್ಲಿ ವಿಧಾನ ಪರಿಷತ್ ಸದಸ್ಯ ಭೋಜೇಗೌಡ ಈ ವಿಷಯ ಪ್ರಸ್ತಾಪಿಸಿದರು. ನಿಯಮದ ಪ್ರಕಾರ ಸಭೆಯಲ್ಲಿ ಶಾಸಕರು ಕೆಳಗಡೆ ಆಸೀನರಾಗಬೇಕು.

ಆದರೆ ಅಧ್ಯಕ್ಷರು ನಮಗೆ ಮೇಲೆಯೇ ಅವಕಾಶ ನೀಡಿದ್ದಾರೆ. ಅವರಿಗೆ ಅಭಿನಂದನೆಗಳು ಎಂದರು.

ಶಾಸಕ ಶಾಂತನಗೌಡ ಅವರು ನಾವೆಲ್ಲಾ ಕೆಳಗೆ ಕೂರುತ್ತೇವೆ. ಹೊರ ಭಾಗದಿಂದ ಬಂದವರಿಗೆ ಮೇಲೆ ಕೂರಲು ಅವಕಾಶ ಕಲ್ಪಿಸಿಕೊಡುತ್ತೇವೆಂದು ಕೆಳಗೆ ಹೋರಟಿದ್ದರು. ನಾನೇ ಎಲ್ಲರೂ ಜೊತೆ ಕೂರೋಣ ಎಂದು ಹೇಳಿದ್ದಕ್ಕೆ ಎಲ್ಲರೂ ಕುಳಿತಿದ್ದಾರೆ ಎಂದು ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ವಿಪ ಸದಸ್ಯ ಭೋಜೇಗೌಡರಿಗೆ ಹೇಳಿದರು.

ಬಿಜೆಪಿ ಹಾಗೂ ಜೆಡಿಎಸ್‌ನ ವಿಪ ಸದಸ್ಯರೂ ಸಭೆಗೆ ಬಂದಿದ್ದೀರಿ. ಎಲ್ಲರೂ ಮಾತನಾಡಿಕೊಂಡು ಬಂದಿದ್ದೀರೇನು? ಎಂದು ಸಚಿವರು ಮುಗುಳ್ನಗುತ್ತಾ ಪ್ರಶ್ನಿಸಿದಾಗ, ಹೌದು, ಮಲ್ಲಣ್ಣ ಊಟಕ್ಕೆ ಹಾಕಿಸ್ತಾರೆ ಎಂದು ಬಂದಿದ್ದೇವೆ ಎಂದು ಭೋಜೇಗೌಡ್ರು ಚಟಾಕಿ ಹಾರಿಸಿದರು.

# ಸಿದ್ದರಾಮಯ್ಯ ಸರ್ಕಾರ ಅಸ್ಥಿರಗೊಳಿಸಲು ದೆಹಲಿ ಹಂತದಲ್ಲಿ ಚಟುವಟಿಕೆ ?

ಬೆಂಗಳೂರು, ಜು. 30 -ಮುಡಾ ಹಗರಣದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರವನ್ನು ಅಸ್ಥಿರಗೊಳಿಸಲು ದೆಹಲಿ ಮಟ್ಟದಲ್ಲಿ ಚಟುವಟಿಕೆಗಳು ನಡೆದಿವೆ ಎಂಬ ಮಾತುಗಳು ರಾಜಕೀಯ ವಲಯದಲ್ಲಿ ಕೇಳಿ ಬರುತ್ತಿವೆ.

ಮುಡಾ ಹಗರಣ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಮೊಕದ್ದಮೆ ಹೂಡಲು ಅನುಮತಿ ನೀಡುವಂತೆ ನ್ಯಾಯವಾದಿ ಟಿ.ಜೆ.ಅಬ್ರಹಾಂ ಅವರು ಇತ್ತೀಚೆಗೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರಿಗೆ ದೂರು ನೀಡಿ ಮನವಿ ಮಾಡಿಕೊಂಡಿದ್ದರು.

ಈ ದೂರಿನ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ರಾಜ್ಯಪಾಲರು ವಿವರಣೆ ಕೋರಿ ಪತ್ರ ಬರೆದಿದ್ದಾರೆಂಬ ಮಾಹಿತಿ ಹಿನ್ನೆಲೆಯಲ್ಲಿ, ವಿಷಯವನ್ನು ಮತ್ತಷ್ಟು ಗಂಭೀರಗೊಳಿಸಲು ದೆಹಲಿ ಮಟ್ಟದಲ್ಲಿ ಪ್ರಯತ್ನಗಳು ನಡೆದಿವೆ ಎಂದು ಮೂಲಗಳು ತಿಳಿಸಿವೆ.

ಮುಡಾ ಹಗರಣ ಸಂಬಂಧ ಟಿ.ಜೆ.ಅಬ್ರಹಾಂ ನೀಡಿರುವ ದೂರಿನ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ವಿರುದ್ಧದ ವಿಚಾರಣೆಗೆ ರಾಜ್ಯಪಾಲರು ಅನುಮತಿ ನೀಡುವ ಪರಿಸ್ಥಿತಿ ಉದ್ಭವಿಸದಂತೆ ಪ್ರತಿ ತಂತ್ರಗಾರಿಕೆಯಲ್ಲಿ ರಾಜ್ಯ ಸರ್ಕಾರ ನಿರತವಾಗಿದೆ.

ದೆಹಲಿ ಮಟ್ಟದಲ್ಲಿ ರಾಜಕೀಯ ಪಿತೂರಿಗಳು ಆರಂಭವಾಗಿರುವ ಬೆನ್ನಲ್ಲೇ ರಾಜ್ಯ ಸರ್ಕಾರ ತನ್ನ ದಾಳ ಉರುಳಿಸಲು ಸಜ್ಜಾಗಿದ್ದು, ಬರುವ ಸಚಿವ ಸಂಪುಟ ಸಭೆಯಲ್ಲಿ ಈ ಸಂಬಂಧ ಮಹತ್ವದ ನಿರ್ಧಾರ ಕೈಗೊಳುವ ಸಾಧ್ಯತೆ ಇದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಮೊಕದ್ದಮೆ ಹೂಡಲು ರಾಜ್ಯಪಾಲರು ಅನುಮತಿ ನೀಡಬಹುದೆಂಬ ಶಂಕೆಗೆ ಕಾರಣವೂ ರಾಜಕೀಯ ವಲಯದಲ್ಲಿ ಕೇಳಿಬರುತ್ತಿದೆ.

ಈ ಹಿಂದೆ ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದಾಗ, ಅವರ ವಿರುದ್ಧ ಶಿವಮೊಗ್ಗದ ನ್ಯಾಯವಾದಿಗಳಿಬ್ಬರು ಅಂದಿನ ರಾಜ್ಯಪಾಲ ಹಂಸರಾಜ್ ಭಾರಧ್ವಾಜ್ ಅವರಿಗೆ ಮನವಿ ಸಲ್ಲಿಸಿ, ಮುಖ್ಯಮಂತ್ರಿಗಳ ವಿರುದ್ಧ ವಿಚಾರಣೆಗೆ ಅನುಮತಿ ಕೋರಿದ್ದರು.

ಈಗ ಸಿದ್ದರಾಮಯ್ಯ ವಿರುದ್ಧ ಅದೇ ತಂತ್ರಗಾರಿಕೆ ಬಳಸಲು ದೆಹಲಿ ಮಟ್ಟದಲ್ಲಿ ಯತ್ನಗಳು ನಡೆಯುತ್ತಿವೆ ಎಂಬ ಮಾತುಗಳು ಕೇಳಿಬರುತ್ತಿವೆ.

**WALK IN**
**FACULTIES & COUNCELOR**
BCA., Dip/BE (Civil) with Computers Skills
For Computer Institute
Timings : 10.00 am to 6.00pm
08192 33022, 9964023706

**FLAT FOR LEASE**
3 BHK, Sqft :1888
AM Apartment, Nainika Prime Rose, Vidyanagar Last City Bus Stop, Davanagere.
89519 38228, 80502 22181

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಸ್ಪೆಷಲ್ ಆಫರ್ ಫಾರ್ ಓಪನಿಂಗ್**
**200/-**


ಸಂಪರ್ಕಿಸಿ : ಪುನಃಚೇತನ ಹೆಲ್ತ್ ಕೇರ್
7ನೇ ಕ್ರಾಸ್, 8ನೇ ಮೇನ್, ಪಿ.ಜೆ.ಬಡಾವಣೆ, ದಾವಣಗೆರೆ.
ಮೊ : 9916933905
ಭೇಟಿ ಸಮಯ : ಬೆ 10-30 ರಿಂದ 6ರವರೆಗೆ
(ಭಾನುವಾರ ರಜೆ)

# ಬಿಜೆಪಿಯಿಂದ ಭದ್ರೆಗೆ ಬಾಗಿನ

(3ನೇ ಪುಟದಿಂದ) ಲೋಕಸಭಾ ಕ್ಷೇತ್ರದ ಬಿಜೆಪಿಯಿಂದ ಇಂದು ಬಾಗಿನ ಅರ್ಪಿಸಲಾಯಿತು.

ರೈತ ಸಮುದಾಯಕ್ಕೆ ಒಳಿತಾಗಲಿ ಮತ್ತು ಪ್ರತಿ ವರ್ಷವೂ ಭದ್ರಾ ಜಲಾಶಯವು ಇದೇ ರೀತಿ ಮೈದುಂಬಿಕೊಳ್ಳಲಿ ಎಂದು ಸಂಕಲ್ಪಿಸಿ ಜಿ.ಎಂ.ಸಿದ್ದೇಶ್ವರ ಮತ್ತು ಶ್ರೀಮತಿ ಗಾಯತ್ರಿ ದಂಪತಿ, ಈ ಕ್ಷೇತ್ರದ ಶಾಸಕರು, ಮಾಜಿ ಶಾಸಕರು ಭದ್ರೆಗೆ ವಿಶೇಷ ಪೂಜೆಯೊಂದಿಗೆ ಬಾಗಿನ ಸಮರ್ಪಿಸಿದರು.

ಶಾಸಕ ಬಿ.ಪಿ. ಹರೀಶ್, ವಿಧಾನ ಪರಿಷತ್ ಸದಸ್ಯ ಕೆ.ಎಸ್. ನವೀನ್, ಮಾಜಿ ಶಾಸಕರುಗಳಾದ ಎಸ್.ವಿ. ರಾಮಚಂದ್ರಪ್ಪ, ಪ್ರೊ. ಲಿಂಗಣ್ಣ, ಉಪ ಮೇಯರ್ ಯಶೋಧ, ಜೆಡಿಎಸ್ ಜಿಲ್ಲಾಧ್ಯಕ್ಷ ಚಿದಾನಂದಪ್ಪ, ಮುಖಂಡರುಗಳಾದ ಎಚ್.ಎನ್. ಶಿವಕುಮಾರ್, ಜಿ.ಎಸ್. ಅನಿತ್ ಕುಮಾರ್, ಯಶವಂತರಾವ್ ಜಾಧವ್, ಎಸ್.ಎಂ. ವೀರೇಶ್ ಹನಗವಾಡಿ, ಬಿ.ಎಸ್. ಜಗದೀಶ್, ರಾಜನಹಳ್ಳಿ ಶಿವಕುಮಾರ್, ಶ್ರೀನಿವಾಸ್ ದಾಸಕರಿಯಪ್ಪ, ಶಾಂತರಾಜ್ ಪಾಟೀಲ್, ಕೊಳೇನಹಳ್ಳಿ ಸತೀಶ್, ಚನ್ನಪ್ಪ, ಮಂಡಲ ಅಧ್ಯಕ್ಷ ಸಂಗನಗೌಡ್ರು, ಶ್ಯಾಗಲೆ ದೇವೇಂದ್ರಪ್ಪ ಹಾಗೂ ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಮುಡಾ ಹಗರಣ ನಡೆದಿಲ್ಲ : ಹೈಕಮಾಂಡ್‌ಗೆ ಸಿಎಂ ಮಾಹಿತಿ

ಬೆಂಗಳೂರು, ಜು. 30 - ಮುಡಾ ಹಗರಣದಲ್ಲಿ ಯಾವುದೇ ಅವ್ಯವಹಾರವಾಗಲೀ, ಭ್ರಷ್ಟಾಚಾರವಾಗಲೀ ನಡೆದಿಲ್ಲ. ಇದರಲ್ಲಿ ತಮ್ಮ ಯಾವುದೇ ಪಾತ್ರವಿಲ್ಲ ಎಂದು ಕಾಂಗ್ರೆಸ್ ಹೈಕಮಾಂಡ್‌ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮನದಟ್ಟು ಮಾಡುವ ಪ್ರಯತ್ನ ಮಾಡಿದ್ದಾರೆ.

ದೆಹಲಿಗೆ ಒಂದು ದಿನದ ಭೇಟಿ ನೀಡಿರುವ ಅವರು, ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪಕ್ಷದ ಅಧಿನಾಯಕ ರಾಹುಲ್ ಗಾಂಧಿ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಸೇರಿದಂತೆ ಹಲವು ಮುಖಂಡರಿಗೆ ತಮ್ಮ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದ ದಾಖಲೆಗಳನ್ನು ನೀಡಿದ್ದಾರೆ.

ಮುಡಾ ಹಗರಣದಲ್ಲಿ ತಮ್ಮ ಯಾವುದೇ ಪಾತ್ರವಿಲ್ಲ, ಮುಡಾ ಸ್ವಾಧೀನಪಡಿಸಿಕೊಂಡ ತಮ್ಮ ಧರ್ಮಪತ್ನಿಯ ಜಮೀನಿಗೆ ಬದಲಾಗಿ 14 ನಿವೇಶನಗಳನ್ನು ಮೈಸೂರು ಅಭಿವೃದ್ಧಿ ಪ್ರಾಧಿಕಾರ ತಮ್ಮ ಕುಟುಂಬಕ್ಕೆ ನೀಡಿದ್ದು, ಇದರಲ್ಲಿ ಯಾವುದೇ ಅವ್ಯವಹಾರ ಅಥವಾ ಭ್ರಷ್ಟಾಚಾರ ನಡೆದಿಲ್ಲ ಎಂದವರು ತಿಳಿಸಿದ್ದಾರೆ.

ಮುಡಾ ನಿವೇಶನ ಪಡೆಯಲು ಮುಖ್ಯಮಂತ್ರಿಯಾಗಿ ಅಧಿಕಾರ ದುರುಪಯೋಗ ಪಡಿಸಿಕೊಂಡಿಲ್ಲ, ಪ್ರಾಧಿಕಾರದ ತೀರ್ಮಾನದಂತೆ ತಮ್ಮ ಕುಟುಂಬಕ್ಕೆ ನಿವೇಶನ ಹಂಚಿಕೆಯಾಗಿದೆ, ಇದರಲ್ಲಿ ಸರ್ಕಾರದ ಪಾತ್ರವೂ ಇಲ್ಲ ಎಂದು ಪಕ್ಷದ ವರಿಷ್ಠರಿಗೆ ಸ್ಪಷ್ಟಪಡಿಸಿದ್ದಾರೆ.

ಮಹರ್ಷಿ ವಾಲ್ಮೀಕಿ ನಿಗಮದ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಮಜಾಯಿಷಿ ನೀಡಿರುವ ಮುಖ್ಯಮಂತ್ರಿ, ಪ್ರಕರಣಕ್ಕೆ ಸಂಬಂಧಿಸಿದಂತೆ ಎಸ್ಐಟಿ ಈಗಾಗಲೇ ತನಿಖೆ ನಡೆಸುತ್ತಿದೆ. ಆರೋಪ ಎದುರಿಸುತ್ತಿರುವ ಕೆಲವು ಅಧಿಕಾರಿಗಳ ಬಂಧನವೂ ಆಗಿದ್ದು, ಆರೋಪಿಗಳಿಂದ ಬಹಳಷ್ಟು ಪ್ರಮಾಣದಲ್ಲಿ ಹಣವನ್ನೂ ವಾಪಸ್ ಪಡೆಯಲಾಗಿದೆ.

ಹಗರಣದ ಮಾಹಿತಿ ಬಹಿರಂಗವಾಗುತ್ತಿದ್ದಂತೆ ಸಂಬಂಧಪಟ್ಟ ಸಚಿವರ ರಾಜೀನಾಮೆಯನ್ನೂ ಪಡೆಯಲಾಗಿದೆ. ಅಲ್ಲದೆ, ಅವರನ್ನು ತನಿಖಾ ಸಂಸ್ಥೆ ವಿಚಾರಣೆಗೂ ಒಳಪಡಿಸಿದೆ ಎಂಬುದಾಗಿ ಪ್ರಕರಣದ ಪೂರ್ಣ ವಿವರಗಳನ್ನು ಹೈಕಮಾಂಡ್ ಮುಂದಿಟ್ಟಿದ್ದಾರೆ.

ಹಗರಣ ಸಂಬಂಧ ಕೇಂದ್ರ ಸರ್ಕಾರ ರಾಜಕೀಯ ಸೇಡಿನ ಕ್ರಮಕೈಗೊಳ್ಳುತ್ತಿದ್ದು, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ನೀಡಿದ ದೂರಿನ ಆಧಾರದ ಮೇಲೆ ಜಾರಿ ನಿರ್ದೇಶನಾಲಯ (ಇ.ಡಿ.) ಮತ್ತು ಸಿಬಿಐ ತನಿಖೆ ನೆಪದಲ್ಲಿ ಕರ್ನಾಟಕದಲ್ಲಿನ ಕಾಂಗ್ರೆಸ್ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವ ಪ್ರಯತ್ನ ಮಾಡುತ್ತಿವೆ. ಮುಡಾ ಆಡಳಿತ ಲೋಪಕ್ಕೆ ಸಂಬಂಧಿಸಿದಂತೆ ನ್ಯಾಯಾಂಗ ತನಿಖೆಗೂ ಆದೇಶ ಮಾಡಿದ್ದೇನೆ ಎಂದು ಮುಖ್ಯಮಂತ್ರಿ ಸಮಜಾಯಿಷಿ ನೀಡಿದ್ದಾರೆ.

ಕರ್ನಾಟಕದಲ್ಲಿನ ಪ್ರತಿಪಕ್ಷ ಬಿಜೆಪಿ ಮತ್ತು ಜೆಡಿಎಸ್ ನಿರಾಧಾರ ಹಗರಣಗಳನ್ನೇ ಮುಂದಿಟ್ಟುಕೊಂಡು, ರಾಜಕೀಯ ದುರುದ್ದೇಶದಿಂದ ಬೀದಿಗಿಳಿದು ಹೋರಾಡುವ ನೆಪದಲ್ಲಿ ತಮ್ಮ ವರ್ಚಸ್ಸಿಗೆ ಮಸಿ ಬಳಿಯುವ ಯತ್ನದಲ್ಲಿ ತೊಡಗಿವೆ ಎಂದು ದೂರಿದ್ದಾರೆ.

ಕರ್ನಾಟಕ ವಿಧಾನಮಂಡಲದ ಅಧಿವೇಶನ ಸಂದರ್ಭದಲ್ಲೂ ಪ್ರತಿಪಕ್ಷ ಬಿಜೆಪಿ-ಜೆಡಿಎಸ್ ಎತ್ತಿದ ವಾಲ್ಮೀಕಿ ಹಗರಣ ಚರ್ಚೆಗೆ ಸದನದಲ್ಲೇ ಸಮರ್ಪಕ ಉತ್ತರ ನೀಡಿದ್ದು, ಆದಾಗ್ಯೂ ವಿರೋಧ ಪಕ್ಷಗಳು ಪ್ರಕರಣಗಳನ್ನು ಅನಗತ್ಯವಾಗಿ ಸಾರ್ವಜನಿಕವಾಗಿ ಚರ್ಚೆಯ ವಿಷಯವನ್ನಾಗಿಸುತ್ತಿವೆ ಎಂದು ಸಿದ್ದರಾಮಯ್ಯ ಹೈಕಮಾಂಡ್‌ಗೆ ತಿಳಿಸಿದ್ದಾರೆ.


ಹಾರ್ದಿಕ ಅಭಿನಂದನೆಗಳು
ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕರಾದ
ಸನ್ಮಾನ್ಯ ಡಾ. ಶಾಮನೂರು ಶಿವಶಂಕರಪ್ಪರವರು
ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರಾದ
ಸನ್ಮಾನ್ಯ ಶ್ರೀ ಎಸ್. ಎಸ್. ಮಲ್ಲಿಕಾರ್ಜುನ್‌ರವರು
ದಾವಣಗೆರೆ ಲೋಕಸಭಾ ಸದಸ್ಯರಾದ
ಸನ್ಮಾನ್ಯ ಡಾ|| ಶ್ರೀಮತಿ ಪ್ರಭಾ ಮಲ್ಲಿಕಾರ್ಜುನ್‌ರವರು
ಹಾಗೂ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದ
ಸನ್ಮಾನ್ಯ ಶ್ರೀ ಎಚ್.ಬಿ. ಮಂಜಪ್ಪನವರ
ಮಾರ್ಗದರ್ಶನ ಹಾಗೂ ಸಹಕಾರದೊಂದಿಗೆ
ದಿನಾಂಕ 31-07-2024 ರ ಬುಧವಾರ ಬೆಳಗ್ಗೆ 11-00 ಕ್ಕೆ
ಶ್ರೀಯುತ ದಿನೇಶ್ ಕೆ. ಶೆಟ್ಟಿ
ಅವರು ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ನೂತನ ಅಧ್ಯಕ್ಷರಾಗಿ ಅಧಿಕಾರ ಸ್ವೀಕಾರ ಮಾಡಲಿದ್ದಾರೆ.
ಬೆಳ್ಳಿಗೆ 10.30 ಕ್ಕೆ ರಾಮ್ & ಕೋ ಸರ್ಕಲ್ ನಲ್ಲಿರುವ ಶ್ರೀ ಗಣೇಶ ದೇವಸ್ಥಾನದಲ್ಲಿ ಪೂಜೆಯ ನಂತರ
ಹಳೇಪೇಟೆ ನಗರದೇವತೆ ಶ್ರೀ ದುಗ್ಗಮ್ಮನ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ನಗರಾಭಿವೃದ್ಧಿ ಪ್ರಾಧಿಕಾರದ ಕಚೇರಿಗೆ ಆಗಮಿಸಿ
ಅಧಿಕಾರ ಸ್ವೀಕಾರ ಮಾಡಲಿದ್ದಾರೆ. ಆದ್ದರಿಂದ ಜನ ಪ್ರತಿನಿಧಿಗಳು, ಪಕ್ಷದ ಮುಖಂಡರು, ಮಹಾನಗರ ಪಾಲಿಕೆ ಸದಸ್ಯರು,
ಪಕ್ಷದ ಎಲ್ಲಾ ಪದಾಧಿಕಾರಿಗಳು, ಕಾರ್ಯಕರ್ತರು, ಅಭಿಮಾನಿಗಳು, ಎಲ್ಲರೂ ಆಗಮಿಸಬೇಕಾಗಿ ತಮ್ಮಲ್ಲಿ ವಿನಂತಿ.
ಶುಭ ಕೋರುವವರು :
ಎ. ನಾಗರಾಜ್ ಸ್ನೇಹಿತರ ಬಳಗ
ವಿನೋಬನಗರ, ದಾವಣಗೆರೆ.
SWEAT PARK
FITNESS ARENA
STUDIO 11
salon&spa
DAVANGERE



# ಹೃತ್ಪೂರ್ವಕ ಅಭಿನಂದನೆಗಳು

ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ನೂತನ ಅಧ್ಯಕ್ಷರಾಗಿ

ಇಂದು ಅಧಿಕಾರ ಸ್ವೀಕರಿಸುತ್ತಿರುವ ನಮ್ಮೆಲ್ಲರ ಸ್ನೇಹಿತರು, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳೂ, ದಾವಣಗೆರೆ ನಗರಸಭೆಯ ಮಾಜಿ ಅಧ್ಯಕ್ಷರೂ ಆದ

## ಶ್ರೀ ದಿನೇಶ್ ಕೆ. ಶೆಟ್ಟಿ

ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು.

ಶ್ರೀಯುತರ ಅವಧಿಯಲ್ಲಿ ದಾವಣಗೆರೆ-ಹರಿಹರದಲ್ಲಿ ಹೊಸ ಬಡಾವಣೆಗಳು ನಿರ್ಮಾಣಗೊಳ್ಳಲಿ, ನಿವೇಶನ ರಹಿತರಿಗೆ ನಿವೇಶನಗಳು ಲಭ್ಯವಾಗಲಿ ಎಂದು ಹಾರೈಸುತ್ತೇವೆ.

- ✦ ಡಾ. ಹೆಚ್. ವಿಶ್ವನಾಥ್ – ಪರೀಕ್ಷಾಂಗ ಕುಲ ಸಚಿವರು ಮುಕ್ತ ವಿಶ್ವವಿದ್ಯಾಲಯ, ಮೈಸೂರು.
- ✦ ಆರ್. ಮಹೇಶ್ ಶೆಟ್ಟಿ – ವೈಶಾಲಿ ಗ್ರೂಪ್ ಆಫ್ ಹೋಟೆಲ್ಸ್, ದಾವಣಗೆರೆ.
- ✦ ಜೆ. ಈಶ್ವರ್‌ಸಿಂಗ್ ಕವಿತಾಳ – ಮಾಲೀಕರು, ಬಿಂದಾಸ್ ಗ್ರೂಪ್ ಆಫ್ ಕಂಪನಿ
- ✦ ಹರೀಶ್ ಬೇತೂರ್ – ಪಾಲುದಾರರು, ಹೋಟೆಲ್ ಗ್ರೀನ್ ಪಾರ್ಕ್, ದಾವಣಗೆರೆ.
- ✦ ಬದರಿನಾಥ್ ಆರ್.ಜಿ. ಆರ್. ಎಂಪೈರ್ ಹೋಟೆಲ್













# ನಗರದ ಮಾಗಿ ಕುಟುಂಬದಿಂದ ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ಅಕ್ಕಿ ಸಮರ್ಪಣೆ



ದಾವಣಗೆರೆ, ಜು. 30- ದಿ. ಶ್ರೀಮತಿ ಬಸಮ್ಮ ಶ್ರೀ ವೀರಬಸಪ್ಪ ಮಾಗಿ ಕುಟುಂಬದ ವತಿಯಿಂದ ಧರ್ಮಸ್ಥಳದ ಮಂಜುನಾಥ ಸ್ವಾಮಿ ಸನ್ನಿಧಿಗೆ ನಾಲ್ಕನೇ ವರ್ಷ ಒಂದು ಲೋಡ್ ಅಕ್ಕಿಯನ್ನು ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾ ಕಾರ್ಯದರ್ಶಿಗಳು ಹಾಗೂ ಚೌಕಿಪೇಟೆ ಅಕ್ಕಿ ವರ್ತಕರ ಸಂಘದ ಅಧ್ಯಕ್ಷ ಜಯಪ್ರಕಾಶ್ ಮಾಗಿ ಹಾಗೂ ಶ್ರೀಮತಿ ದಾನೇಶ್ವರಿ ಮಾಗಿ ದಂಪತಿ, ಕೈಲಾಶ್ ಬಾಬು ಶ್ರೀಮತಿ ರೂಪ ದಂಪತಿ ಅವರು ಹಳೇ ಪೇಟೆಯ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಇಂದು ಬೆಳಿಗ್ಗೆ ಪೂಜೆ ಸಲ್ಲಿಸಿ ಧರ್ಮಸ್ಥಳಕ್ಕೆ ಭಕ್ತಿ ಸಮರ್ಪಸಲು ತೆರಳಿದರು.

ಈ ಲಾರಿಗೆ ಮಾಜಿ ದೂಡಾ ಅಧ್ಯಕ್ಷ ದೇವರಮನಿ ಶಿವಕುಮಾರ್, ರಾಜ್ಯ ಬಿಜೆಪಿ ಎಸ್ಸಿ ಮೋರ್ಚಾ ಉಪಾಧ್ಯಕ್ಷ ಶ್ರೀನಿವಾಸ್ ದಾಸಕರಿಯಪ್ಪ ಅವರು ಚಾಲನೆ ನೀಡಿದರು.

ಈ ಸಂದರ್ಭದಲ್ಲಿ, ಮಾಜಿ ಮೇಯರ್ ಅಶ್ವಿನಿ ಪ್ರಶಾಂತ್, ಮಹಾನಗರ ಪಾಲಿಕೆ ಮಾಜಿ ಸದಸ್ಯ ಶಿವನಗೌಡ ಟಿ. ಪಾಟೀಲ್, ವಿನಾಯಕ ಮಿಲ್ ವಿ. ಸಿದ್ದೇಶ್. ಎಸ್. ರಾಜೇಶ್, ಜಿ.ಬಿ. ಉಮೇಶ್, ಬಿ.ಪಿ.ಎಂ. ಜಗದೀಶ್, ಬಿ.ಪಿ.ಎಂ. ಮಂಜುನಾಥ್, ವಿನಾಯಕ ಬ್ಯಾಡಗಿ, ಜಯರಾಜ್ ಮೇಟಿ, ಪ್ರಕಾಶ್ ಮೇಟಿ, ಎಂ.ವೈ. ಆನಂದ, ಸಂಗಮೇಶ ಗದಗ, ಅಶೋಕ ಇಂಜಿನಿಯರ್, ಆರ್.ಎಂ ಪಂಚಾಕ್ಷರಿ, ಪರುಶುರಾಮ್ ಪಿ.ಎಸ್. ಸತೀಶ್ ಹುಬ್ಬಳ್ಳಿ, ನಿಖಿಲ್ ಮಾಗಿ, ಹರ್ಷ ಮಾಗಿ ಮತ್ತಿತರರು ಉಪಸ್ಥಿತರಿದ್ದರು.

## ಭಾರತೀಯ ರೈತ ಒಕ್ಕೂಟದಿಂದ ಆಗಸ್ಟ್ 3ರಂದು ಭದ್ರೆಗೆ ಬಾಗಿನ

ದಾವಣಗೆರೆ, ಜು. 30 - ಭಾರತೀಯ ರೈತ ಒಕ್ಕೂಟದಿಂದ ಆಗಸ್ಟ್ 3ರ ಶನಿವಾರ ಬೆಳಿಗ್ಗೆ 11.30ಕ್ಕೆ ತುಂಬಿರುವ ಭದ್ರೆಗೆ ಬಾಗಿನ ಅರ್ಪಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಭಾರತೀಯ ರೈತ ಒಕ್ಕೂಟದ ಜಿಲ್ಲಾಧ್ಯಕ್ಷ ಹೆಚ್.ಆರ್. ಲಿಂಗರಾಜ್ ಶಾಮನೂರು ಅವರು ತಿಳಿಸಿದ್ದಾರೆ.

ಬಾಗಿನ ಅರ್ಪಿಸುವ ಕಾರ್ಯಕ್ರಮದಲ್ಲಿ ಮಾಜಿ ಸಚಿವ ಎಸ್.ಎ.ರವೀಂದ್ರನಾಥ್, ನೀರಾವರಿ ತಜ್ಞ ಪ್ರೊ. ಸಿ. ನರಸಿಂಹಪ್ಪ ಅವರೂ ಸೇರಿದಂತೆ ಸಚಿವರು, ಮಾಜಿ ಸಚಿವರು, ಸಂಸದರು, ಮಾಜಿ ಸಂಸದರು, ಶಾಸಕರು, ಮಾಜಿ ಶಾಸಕರು ಸೇರಿದಂತೆ ಅನೇಕ ಜನಪ್ರತಿನಿಧಿಗಳು ಭಾಗವಹಿಸುವರು ಎಂದು ಅವರು ವಿವರಿಸಿದ್ದಾರೆ.

## ಹರಿಹರದಲ್ಲಿಂದು ವಿದ್ಯಾರ್ಥಿಗಳಿಗೆ ಪುಸ್ತಕ ವಿತರಣೆ

ಶ್ರೀ ಸತ್ಯ ಸಾಯಿ ಸೇವಾ ಸಂಸ್ಥೆ ವತಿಯಿಂದ ಇಂದು ಬೆಳಿಗ್ಗೆ ಕೆಂಚನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ನಗರದ ಹರಿಹರೇಶ್ವರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ವಿದ್ಯಾರ್ಥಿಗಳಿಗೆ ಪುಸ್ತಕ, ಪೆನ್, ಬಿಸ್ಕತ್ತು ವಿತರಣೆ ಕಾರ್ಯಕ್ರಮ ವನ್ನು ಹಮ್ಮಿಕೊಳ್ಳ ಲಾಗಿದೆ ಎಂದು ಸಂಚಾಲಕ ಎನ್. ಕೃಷ್ಣಪ್ಪ, ಯೋಗಿತಾ ತಿಳಿಸಿದ್ದಾರೆ.

## ಇಂದು ಜಿ.ಎಂ. ಸಿದ್ದೇಶ್ವರರಿಂದ ಸಾರ್ವಜನಿಕರ ಭೇಟಿ

ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ ಅವರು ಇಂದು ಮಧ್ಯಾಹ್ನ 2 ಗಂಟೆಯಿಂದ ಸಂಜೆ 5ರವರೆಗೆ ಜಿಎಂಐಟಿ ಅತಿಥಿ ಗೃಹದಲ್ಲಿ ಸಾರ್ವಜನಿಕರನ್ನು ಭೇಟಿ ಮಾಡಲಿದ್ದಾರೆ.

ಸಂಜೆ 6.30ರಿಂದ ನಗರದ ಅಭಿನವ ರೇಣುಕ ಮಂದಿರದಲ್ಲಿ ಬಾಳೆಹೊನ್ನೂರು ಶ್ರೀಮದ್ ರಂಭಾಪುರಿ ಜಗದ್ಗುರುಗಳವರ ಆಷಾಢ ಮಾಸದ ಇಷ್ಟಲಿಂಗ ಮಹಾಪೂಜೆ ಜನ ಜಾಗೃತಿ ಧರ್ಮ ಸಮಾವೇಶದ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

# ಪಾದಯಾತ್ರೆಯ ವಿರುದ್ಧ ಸಾರ್ವಜನಿಕ ಸಭೆ : ಪರಮೇಶ್ವರ್

ಬೆಂಗಳೂರು, ಜು. 30 - ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳು ಮೈಸೂರಿನ ಮುಡಾ ವಿಷಯಕ್ಕೆ ಸಂಬಂಧಿಸಿದಂತೆ ಪಾದಯಾತ್ರೆ ಹಮ್ಮಿಕೊಂಡಿರುವ ವಿರುದ್ಧ ಸಾರ್ವಜನಿಕ ಸಭೆಗಳನ್ನು ಆಯೋಜಿಸಲು ಕಾಂಗ್ರೆಸ್ ಯೋಜಿಸಿದೆ ಎಂದು ಪಕ್ಷದ ನಾಯಕ ಹಾಗೂ ಗೃಹ ಸಚಿವ ಜಿ. ಪರಮೇಶ್ವರ್ ತಿಳಿಸಿದ್ದಾರೆ.

ಪೊಲೀಸರು ಪಾದಯಾತ್ರೆಗೆ ಅನುಮತಿ ನೀಡುವುದಿಲ್ಲ. ಆದರೆ, ಅದನ್ನು ತಡೆಯುವುದೂ ಇಲ್ಲ. ಕಾನೂನು ಉಲ್ಲಂಘನೆ ಆದರೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಸಚಿವರು ಹೇಳಿದ್ದಾರೆ.

ಸತ್ಯ ಏನೆಂಬುದನ್ನು ಕಾಂಗ್ರೆಸ್ ಪಕ್ಷ ಜನರಿಗೆ ತಿಳಿಸಲಿದೆ. ಮಂಡ್ಯ, ಬಿಡದಿ, ರಾಮನಗರ, ಮೈಸೂರುಗಳಲ್ಲಿ ಅವರು ಸುಳ್ಳುಗಳನ್ನು ಹರಡುವುದಕ್ಕೆ ಮುಂಚೆ ನಾವು ಆಗಸ್ಟ್ ಎರಡರಂದು ಸಭೆಗಳನ್ನು ನಡೆಸಿ ಸತ್ಯ ತಿಳಿಸಲಿದ್ದೇವೆ ಎಂದರು.

# ವಾಣಿಜ್ಯ ಸ್ಥಳಗಳಲ್ಲಿ ಗೃಹ ಬಳಕೆಯ ಸಿಲಿಂಡರ್ ವ್ಯಾಪಕ ಬಳಕೆ ನಿಲ್ಲಿಸಿ

ದಾವಣಗೆರೆ, ಜು. 30- ಕೋಟ್ಯಂತರ ರೂ. ನಷ್ಟ ಮತ್ತು ಸ್ಫೋಟದ ಅಪಾಯವನ್ನು ಉಂಟು ಮಾಡುವ ವಾಹನಗಳು ಹಾಗೂ ವಾಣಿಜ್ಯ ಸ್ಥಳಗಳಲ್ಲಿ ಗೃಹ ಬಳಕೆಯ ಸಿಲಿಂಡರ್‌ಗಳ ಬಳಕೆಯನ್ನು ನಿಲ್ಲಿಸಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಗ್ರಾಹಕ ದಕ್ಷತಾ ಕಲ್ಯಾಣ ಫೌಂಡೇಶನ್ ಆಗ್ರಹಿಸಿದೆ.

ಪತ್ರಿಕಾಗೋಷ್ಠಿಯಲ್ಲಿ ಫೌಂಡೇಶನ್ ಕರ್ನಾಟಕ ವಿಭಾಗದ ಮುಖ್ಯಸ್ಥ ಎಸ್. ಚೇತನ್ ಕುಮಾರ್ ಮಾತನಾಡಿ, ವಾಣಿಜ್ಯ ಸಿಲಿಂಡರ್ ಬೆಲೆಗಳು ಸುಮಾರು ನೂರರಷ್ಟು ಹೆಚ್ಚಾಗಿರುವುದರಿಂದ ವಾಣಿಜ್ಯ ಸಂಸ್ಥೆಗಳು ಗೃಹಬಳಕೆಯ 14.2 ಕೆಜಿ ಸಿಲಿಂಡರ್‌ಗಳನ್ನು ಹೆಚ್ಚಾಗಿ ಬಳಸಲು ಪ್ರಾರಂಭಿಸಿವೆ. ಕೆಲವು ಕಡೆಗಳಲ್ಲಿ 14.2 ಕೆಜಿ ಸಿಲಿಂಡರ್‌ಗಳಲ್ಲಿರುವ ಅನಿಲವನ್ನು 19 ಕೆಜಿ ವಾಣಿಜ್ಯ ಸಿಲಿಂಡರ್‌ಗಳನ್ನಾಗಿ ಪರಿವರ್ತಿಸಲಾಗುತ್ತಿದೆ ಎಂದರು.

ಅದಕ್ಕಾಗಿಯೇ ದೇಶಿಯ ಸಿಲಿಂಡರ್‌ಗಳು ವಾಹನಗಳಲ್ಲಿ ವ್ಯಾಪಕವಾಗಿ ಬಳಸಲಾರಂಭಿಸಿವೆ. ಇದು ಅತ್ಯಂತ ಗಂಭೀರವಾಗಿದ್ದು, ಇದರಿಂದ ಸರ್ಕಾರಕ್ಕೆ ಕೋಟ್ಯಂತರ ರೂ. ನಷ್ಟವಾಗುತ್ತಿದೆ. ಸ್ಫೋಟ, ಬೆಂಕಿ ಅವಘಡ ಸಂಭವಿಸುವ ಭೀತಿ ಎದುರಾಗಿದೆ ಎಂದು ಹೇಳಿದರು.

ಗೃಹಬಳಕೆಯ ಸಿಲಿಂಡರ್‌ಗಳಿಗೆ ಅಧಿಕ ಹಣವನ್ನು ನೀಡಿದರೆ ಕಾಳಸಂತೆಕೋರರಿಗೆ ಸುಲಭವಾಗಿ ಸಿಗುತ್ತಿದ್ದು, ಕೆಲವು ಗ್ಯಾಸ್ ಏಜೆನ್ಸಿಯವರು ತೈಲ ಕಂಪನಿಗಳಿಂದ ಹೆಚ್ಚುವರಿ ಸಿಲಿಂಡರ್ ತೆಗೆದುಕೊಳ್ಳುತ್ತಿರುವುದು ಇಷ್ಟೆಲ್ಲಾ ಅವ್ಯವಹಾರಕ್ಕೆ ಕಾರಣವಾಗಿದೆ ಎಂದರು.

ನಕಲಿ ಗ್ರಾಹಕರ ಹೆಸರಿನಲ್ಲಿ ನೋಂದಣಿ ಮಾಡಿಸಿ, ಕಾಳಸಂತೆ ಸೃಷ್ಟಿ ಮಾಡುತ್ತಿದ್ದಾರೆ. ಒಂದೆಡೆ ಸಿಲಿಂಡರ್ ಬೆಲೆ ಏರಿಕೆಯಿಂದ ಜನಸಾಮಾನ್ಯರು, ಬಡವರು ಇತಿಮಿತಿಯಲ್ಲಿ ಸಿಲಿಂಡರ್ ಬಳಸುತ್ತಿದ್ದಾರೆ. ಸದ್ಯ ಎರಡರಿಂದ ಮೂರು ತಿಂಗಳಿಂದ ಒಂದು ಕುಟುಂಬ ಒಂದು ಸಿಲಿಂಡರ್ ಬಳಸುತ್ತಿದೆ ಎಂದು ಹೇಳಿದರು.

ಸುಲಭವಾಗಿ ಗ್ಯಾಸ್ ರೀಫಿಲ್ಲಿಂಗ್ ದಂಧೆ ನಡೆಸಿ, ಅಲ್ಪ ಮೊತ್ತಕ್ಕೆ ಜೀವ ಪಣಕ್ಕಿಟ್ಟು ವಾಹನಗಳಿಗೆ ಹಾಗೂ ಇತರರಿಗೆ ಎಲ್‌ಪಿಜಿ ಗ್ಯಾಸ್ ತುಂಬಿಸಲಾಗುತ್ತಿದೆ. ಟಲ್ಲು ಪಂಪ್ ಸಹಾಯದಿಂದ ಗ್ಯಾಸ್ ಸಿಲಿಂಡರ್ ನಿಂದ ಅತ್ಯಂತ ಸರಳವಾದ ಟ್ಯೂಬ್ ಮೂಲಕ ವಾಹನಕ್ಕೆ ಗ್ಯಾಸ್ ತುಂಬಿಸಲಾಗುತ್ತಿದೆ ಎಂದರು.

ಎಷ್ಟು ಅನಿಲ ತುಂಬಿದೆ ಎಂದು ಅಳೆಯಲು ಎಲೆಕ್ಟ್ರಿಕ್ ಗೇಜ್ (ಎಲೆಕ್ಟ್ರಾನಿಕ್ಸ್ ತೂಕ) ಅನ್ನು ಬಳಕೆ ಮಾಡಲಾಗುತ್ತಿದೆ ಎಂಬುದು ಅತ್ಯಂತ ನಿರ್ಣಾಯಕವಾಗಿದೆ. ವಾಹನಗಳಲ್ಲಿ ಗೃಹ ಬಳಕೆಗಾಗಿ 14.2 ಕೆಜಿ ಎಲ್‌ಪಿಜಿ ಗ್ಯಾಸ್ ತುಂಬಿಸುವುದು ತುಂಬಾ ಅಪಾಯಕಾರಿ ಯಾಗಿದೆ. ಯಾವುದೇ ಕ್ಷಣದಲ್ಲಿ ಸಿಲಿಂಡರ್ ಸ್ಫೋಟಗೊಳ್ಳುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ ಎಂದು ಹೇಳಿದರು.

ಮನೆಯ ಸಿಲಿಂಡರ್‌ಗಳನ್ನು ಅಕ್ರಮವಾಗಿ ಬಳಸಿದರೆ ಜೈಲು ಶಿಕ್ಷೆ ಹಾಗೂ ದಂಡ ವಿಧಿಸಲು ಕಾನೂನಿನಲ್ಲಿ ಅವಕಾಶವಿದೆ. ಸರ್ಕಾರ ಈ ಬಗ್ಗೆ ಗಮನಹರಿಸಬೇಕೆಂದು ಮನವಿ ಮಾಡಿದರು.

ಇಂತಹ ಘಟನೆಗಳಿಂದ ನಾಗರಿಕರಲ್ಲಿ ಭಯದ ವಾತಾವರಣ ನಿರ್ಮಾಣವಾಗಿದ್ದು, ಅಕ್ರಮ ರೀಫಿಲ್ಲಿಂಗ್ ಘಟನೆಗಳು ನಡೆಯುತ್ತಿವೆ. ಅದು ಆಗುವ ಮುನ್ನವೇ ಸರ್ಕಾರ ಮತ್ತು ಆಡಳಿತ ಎಚ್ಚೆತ್ತುಕೊಳ್ಳುವುದು ಅವಶ್ಯಕ. ರಾಜ್ಯದಲ್ಲಿನ ವಿವಿಧೆಡೆಯ ಸ್ಫೋಟಕ ಪ್ರಕರಣಗಳ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸಿ, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಬೇಕೆಂದು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಹುಬ್ಬಳ್ಳಿ ವಿಭಾಗದ ಮುಖ್ಯಸ್ಥ ಅರುಣ್ ಮಾನಗಾಂವೆ ಉಪಸ್ಥಿತರಿದ್ದರು.

# ಎಸ್ಸೆಸ್ ಕೊಂಡಿ ಮಂಚಣ್ಣನಂತೆ

## ಮಕ್ಕಳಿಗೆ ಸಂಸ್ಕಾರ ಕಲಿಸಲಿ : ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ್



ದಾವಣಗೆರೆ, ಜು. 30 – ಕಾಂಗ್ರೆಸ್ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಕೊಂಡಿ ಮಂಚಣ್ಣನಂತೆ ಕೆಲಸ ಮಾಡುತ್ತಿದ್ದಾರೆ. ತಮ್ಮ ಮಗನ ಜಿಂಕೆ ಪ್ರಕರಣದಲ್ಲಿ ಕಣ್ಣೀರು ಹಾಕಿದ್ದಾರೆ. ಅವರು ಮೊದಲು ತಮ್ಮ ಮಕ್ಕಳಿಗೆ ಸಂಸ್ಕಾರ ಕಲಿಸಲಿ ಎಂದು ಕೇಂದ್ರದ ಮಾಜಿ ಸಚಿವ ಜಿ.ಎಂ. ಸಿದ್ದೇಶ್ವರ ಕಿಡಿ ಕಾರಿದ್ದಾರೆ.

ಭದ್ರಾ ಜಲಾಶಯದಲ್ಲಿ ಬಾಗಿನ ಅರ್ಪಿಸಿದ ನಂತರ ಮಾತನಾಡಿದ ಅವರು, ಈ ಹಿಂದೆ ಚನ್ನಗಿರಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಅವರು ಲೋಕಾಯುಕ್ತ ಟ್ರಾಪ್ ಪ್ರಕರಣದಲ್ಲಿ ಸಿಲುಕಿಸಿದ್ದು ನಾನೇ ಎಂದು ಅಪಪ್ರಚಾರ ಮಾಡಿದರು. ಈ ಟ್ರಾಪ್ ಬಗ್ಗೆ ಈ ಗಂಗೆ ಸತ್ಯವಾಗಲೂ ನನಗೆ ಗೊತ್ತಿಲ್ಲ. ಸಂಬಂಧವೂ ಇಲ್ಲ ಎಂದರು.

ಈಗ ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ವಿರುದ್ಧ ನಾನು ಮಾತನಾಡಿದ್ದೇನೆ ಎಂದು ಹೇಳುತ್ತಿದ್ದಾರೆ. ಇದೆಲ್ಲ ಕೊಂಡಿ ಮಂಚಣ್ಣನಂತಹ ಕೆಲಸ ಎಂದು ಸಿದ್ದೇಶ್ವರ ಕಿಡಿ ಕಾರಿದರು.

ರಾಜ್ಯ ಹಾಗೂ ಜಿಲ್ಲೆಯ ಕೆಲ ನಾಯಕರಿಂದಾಗಿ ಕಳೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ ಸೋಲಾಗಿದೆ ಎಂದು ಹೇಳಿದ್ದೇನೆ. ಆದರೆ, ಯಾರ ಹೆಸರೂ ಹೇಳಿಲ್ಲ. ಅಲ್ಲದೇ, ಯಡಿಯೂರಪ್ಪನವರು ರಾಷ್ಟ್ರೀಯ ನಾಯಕರೇ ಹೊರತು ರಾಜ್ಯ ನಾಯಕರಲ್ಲ. ಶಿವಶಂಕರಪ್ಪನವರು ಅಖಿಲ ಭಾರತ ವೀರಶೈವ ಮಹಾಸಭಾ ರಾಷ್ಟ್ರಾಧ್ಯಕ್ಷರಾಗಿದ್ದರೋ, ಅದೇ ರೀತಿ ಯಡಿಯೂರಪ್ಪ ರಾಷ್ಟ್ರೀಯ ನಾಯಕರು ಎಂದರು.

ಯಡಿಯೂರಪ್ಪ ಹಾಗೂ ಅವರ ಮಕ್ಕಳು ಜೈಲಿಗೆ ಹೋಗುತ್ತಾರೆ ಎಂದು ಈ ಹಿಂದೆ ಅವರು ಹೇಳಿದ್ದರು. ಅದು ಚೆನ್ನಾಗಿತ್ತಾ? ಸಚಿವ ಎಂ.ಬಿ. ಪಾಟೀಲರು ಅವರ ಮನೆಗೆ ಬಂದಾಗ ಯಾವ ರೀತಿ ಬೈದು ಕಳಿಸಿದಿರಿ ಎಂಬುದು ಪತ್ರಿಕೆ - ಟಿವಿಗಳಲ್ಲಿ ಬಂದಿದೆ. ಮೊದಲು ನಿಮ್ಮ ಮಕ್ಕಳಿಗೆ ಸಂಸ್ಕಾರ ಕಲಿಸಿ ಎಂದೂ ಟಾಂಗ್ ನೀಡಿದರು.

ಶಿವಶಂಕರಪ್ಪನವರು ಹೇಳಿದಂತೆ ನಾನೇನೂ ಧೃತಿಗೆಟ್ಟಿಲ್ಲ, ಕಣ್ಣೀರೂ ಹಾಕಿಲ್ಲ. ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಜಿಂಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಶಿವಶಂಕರಪ್ಪನವರು ಯಾರ ಮುಂದೆ ಅತ್ತಿದ್ದಾರೆ ಎಂಬುದನ್ನು ಅವರೇ ನೆನಪಿಸಿಕೊಳ್ಳಬೇಕು ಎಂದೂ ಸಿದ್ದೇಶ್ವರ ಹೇಳಿದರು.

ಭೀಮಸಮುದ್ರದಿಂದ ಏನು ತಂದಿದ್ದೇನೆ ಎಂದು ಶಿವಶಂಕರಪ್ಪನವರು ಕೇಳಿದ್ದಾರೆ. ಆದರೆ, ಶಾಮನೂರಿನಿಂದ ಅವರೇನು ತಂದಿದ್ದಾರೆ? ಎಂಬುದನ್ನು ಅವರೇ ತಿಳಿದುಕೊಳ್ಳಬೇಕು. ಶಿವಶಂಕರಪ್ಪನವರಿಗೆ 93 ವರ್ಷ ವಯಸ್ಸಾಗಿದೆ. ನನಗೆ 73 ವರ್ಷ ವಯಸ್ಸಾಗಿದೆ. ಹುಡುಗಾಟಿಕೆಯ ಮಾತನಾಡಬಾರದು ಎಂದು ಹೇಳಿದರು.

ಜನರು ನನ್ನನ್ನು ನಾಲ್ಕು ಬಾರಿ ಚುನಾವಣೆಯಲ್ಲಿ ಗೆಲ್ಲಿಸಿದ್ದಾರೆ. ನನ್ನ ಪತ್ನಿ ಗಾಯತ್ರಿ ಅವರಿಗೆ 6.10 ಲಕ್ಷ ಮತ ನೀಡಿದ್ದಾರೆ. ಅದನ್ನು ಜೀವನದಲ್ಲಿ ಎಂದೂ ಮರೆಯುವುದಿಲ್ಲ. ನಿರಂತರವಾಗಿ ಕಾರ್ಯಕರ್ತರ ಜೊತೆ ಇರುತ್ತೇನೆ, ಕಷ್ಟ ಸುಖಗಳಲ್ಲಿ ಭಾಗಿಯಾಗುತ್ತೇನೆ ಎಂದು ಸಿದ್ದೇಶ್ವರ ತಿಳಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಮುಖಂಡರಾದ ಗಾಯತ್ರಿ ಸಿದ್ದೇಶ್ವರ, ನವೀನ್, ಪ್ರೊ. ಲಿಂಗಣ್ಣ, ಚನ್ನಗಿರಿ ಶಿವಕುಮಾರ್, ಐರಣಿ ಅಣ್ಣೇಶ್, ಸತೀಶ್, ಯಶೋದಮ್ಮ ಎಗ್ಗಪ್ಪ, ಎಸ್.ವಿ. ರಾಮಚಂದ್ರ, ಹನಗವಾಡಿ ವೀರೇಶ್, ಜೆಡಿಎಸ್ ಜಿಲ್ಲಾಧ್ಯಕ್ಷ ಚಿದಾನಂದಪ್ಪ ಮತ್ತಿತರರು ಉಪಸ್ಥಿತರಿದ್ದರು.

# 'ಅವರು ಮೊದಲು ಸಂಸ್ಕಾರ ಕಲಿಯಲಿ'

## ಸಿದ್ದೇಶ್ವರ ವಿರುದ್ಧ ಕಿಡಿಕಾರಿದ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್



ದಾವಣಗೆರೆ, ಜು. 30 - 'ಅವರು ಮೊದಲು ಸಂಸ್ಕಾರ ಕಲಿಯಲಿ. ಅವರ ಮಕ್ಕಳಿಗೆ ಕಲಿಸಲಿ' ಎಂದು ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ ಅವರ ವಿರುದ್ಧ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಕಿಡಿಕಾರಿದ್ದಾರೆ.

ನಗರದ ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಎಸ್.ಎ. ರವೀಂದ್ರನಾಥ್ ಅವರು ಹಿರಿಯರು ಅವರಿಗೆ ಬೆಲೆ ಕೊಡಬೇಕು ಎಂದು ನಮ್ಮ ತಂದೆ ಸರಿಯಾಗಿಯೇ ಹೇಳಿದ್ದಾರೆ ಎಂದರು.

ಲೋಕಸಭೆ ಚುನಾವಣೆಯಲ್ಲಿ ನಾವು ಬಿಜೆಪಿಯ ಯಾವ ನಾಯಕ, ಮುಖಂಡರೊಂದಿಗೂ ಹೊಂದಾಣಿಕೆ ಮಾಡಿಕೊಂಡಿಲ್ಲ. ನಮ್ಮ ಪಕ್ಷದ ಎಲ್ಲ ಶಾಸಕರು, ಕಾರ್ಯಕರ್ತರು ಒಗ್ಗಟ್ಟಿನಿಂದ ಕೆಲಸ ಮಾಡಿದ್ದರಿಂದ ಗೆಲುವು ನಮ್ಮದಾಗಿದೆ.

ಯಡಿಯೂರಪ್ಪ ಅವರು ಹೊಂದಾಣಿಕೆ ಮಾಡಿಕೊಳ್ಳುವ ನಾಯಕರೇ? ಹೊನ್ನಾಳಿಯಲ್ಲಿ ರೇಣುಕಾಚಾರ್ಯ ಹಾಗೂ ಡಿ.ಜಿ. ಶಾಂತನಗೌಡ್ರು ಹೊಂದಾಣಿಕೆ ಮಾಡಿಕೊಳ್ಳುವಂಥವರೇ? ಸೋತ ಮೇಲೆ ಮನಬಂದಂತೆ ಆರೋಪ ಮಾಡಬಾರದು ಎಂದರು.

ನಾನು ಹಾಗೂ ಎಂ.ಬಿ. ಪಾಟೀಲ್ 30 ವರ್ಷದ ಸ್ನೇಹಿತರು. ಏಕವಚನದಲ್ಲಿಯೇ ಮಾತನಾಡುತ್ತೇವೆ. ಸಂಸ್ಕಾರದ ಬಗ್ಗೆ ಬೇರೆಯವರ ಹತ್ತಿರ ಹೇಳಿಸಿಕೊಳ್ಳಬೇಕಿಲ್ಲ ಎಂದರು. ಅಧಿಕಾರಿಗಳ ಬಗ್ಗೆ ಶಾಸಕರು ಅಸಮಾಧಾನ ವ್ಯಕ್ತಪಡಿಸಿದ್ದರ ಕುರಿತ ಪ್ರಶ್ನೆಗೆ ಉತ್ತರಿಸಿದ ಸಚಿವರು, ಇತ್ತೀಚೆಗೆ ಬಂದ ಹೊಸ ಅಧಿಕಾರಿಗಳಿಗೆ ಶಾಸಕರ ಬಗ್ಗೆ ಗೊತ್ತಿಲ್ಲ. ಮುಂದಿನ ದಿನಗಳಲ್ಲಿ ಎಲ್ಲವೂ ಸರಿಯಾಗಲಿ ಎಂದರು.

# ನಗರದಲ್ಲಿ ಇಂದು ಜನಜಾಗೃತಿ ಧರ್ಮ ಸಮಾವೇಶ



**ಕೆ. ಚಿದಾನಂದಪ್ಪ ಅವರಿಗೆ 'ಧರ್ಮ ರತ್ನಾಕರ' ಬಿರುದು ಪ್ರದಾನ**

ಶ್ರೀ ಅಭಿನವ ರೇಣುಕ ಮಂದಿರದಲ್ಲಿ ನಡೆಯುತ್ತಿರುವ ರಂಭಾಪುರಿ ಪೀಠದ ಶ್ರೀಮದ್ ರಂಭಾಪುರಿ ಜಗದ್ಗುರುಗಳವರ 26ನೇ ವರ್ಷದ ಆಷಾಢ ಮಾಸದ ಇಷ್ಟಲಿಂಗ ಮಹಾಪೂಜೆ ಹಾಗೂ ಧರ್ಮೋತ್ತೇಜಕ ಕಾರ್ಯಕ್ರಮದ ಇಂದಿನ ಸಮಾರಂಭದ ವಿವರ.

ಸಂಜೆ 6.30ಕ್ಕೆ ಏರ್ಪಾಡಾಗಿರುವ ಧರ್ಮೋತ್ತೇಜಕ ಸಮಾರಂಭದ ನೇತೃತ್ವವನ್ನು ಶ್ರೀ ರೇಣುಕ ಶಿವಾಚಾರ್ಯ ಸ್ವಾಮಿಗಳು, (ಎಡೆಯೂರು ಕ್ಷೇತ್ರ, ಉಪಾಧ್ಯಕ್ಷರು- ಅ.ಭಾ. ವೀ.ಶಿ. ಸಂಸ್ಥೆ ಬೆಂಗಳೂರು) ವಹಿಸುವರು. ಖಾಸಾ ಶಾಖಾ ಸಂಸ್ಥಾನ (ಮಳಲಿಮಠ)ದ ಶ್ರೀ ಡಾ. ನಾಗಭೂಷಣ ಶಿವಾಚಾರ್ಯ ಸ್ವಾಮಿಗಳು ಉಪದೇಶಾಮೃತ ನೀಡುವರು. ಇದೇ ಸಂದರ್ಭದಲ್ಲಿ ಮಲೇಬೆನ್ನೂರಿನ ಕೈಗಾರಿಕೋದ್ಯಮಿ ಬಿ. ಚಿದಾನಂದಪ್ಪ ಅವರಿಗೆ 'ಧರ್ಮ ರತ್ನಾಕರ' ಬಿರುದಿನೊಂದಿಗೆ ಗೌರವ ಶ್ರೀರಕ್ಷೆ, ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಲೋಕಸಭಾ ಮಾಜಿ ಸದಸ್ಯ ಜಿ.ಎಂ. ಸಿದ್ದೇಶ್ವರ, ಮಾಜಿ ಸಚಿವ ಎಸ್.ಎ. ರವೀಂದ್ರನಾಥ್, ಶಾಸಕ ಬಿ.ಪಿ. ಹರೀಶ್, ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ವಿಧಾನ ಪರಿಷತ್ ಮಾಜಿ ಸದಸ್ಯ ಡಾ. ಎ.ಹೆಚ್. ಶಿವಯೋಗಿಸ್ವಾಮಿ, ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಯಶವಂತರಾವ್ ಜಾಧವ್, ದಾವಣಗೆರೆ-ಹರಿಹರ ಅರ್ಬನ್ ಬ್ಯಾಂಕ್ ಅಧ್ಯಕ್ಷ ಎನ್.ಎ. ಮುರುಗೇಶ್, ಬಿಜೆಪಿ ಜಿಲ್ಲಾಧ್ಯಕ್ಷ ರಾಜಶೇಖರ್ ನಾಗಪ್ಪ ಅವರುಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

## ಆಜಾದ್ ನಗರದಲ್ಲಿ ದಾಳಿ : ಗಾಂಜಾ ವಶ

ದಾವಣಗೆರೆ,ಜು.30- ಇಲ್ಲಿನ ಆಜಾದ್ ನಗರದ 1ನೇ ಮೇನ್, 11ನೇ ಕ್ರಾಸ್‌ನಲ್ಲಿರುವ ಮೆಹಬೂಬಿ ಎಂಬುವರ ಮನೆಯ ಮೇಲೆ ದಾಳಿ ನಡೆಸಿರುವ ಪೊಲೀಸರು ಅಂದಾಜು 2 ಲಕ್ಷ ರೂ. ಬೆಲೆ ಬಾಳುವ 2 ಕೆ.ಜಿ. 150 ಗ್ರಾಂ ಗಾಂಜಾ ವಶಪಡಿಸಿಕೊಂಡಿದ್ದಾರೆ.

ಪಿ.ಎಸ್.ಐ ಪ್ರಮೀಳಮ್ಮ ಹೆಚ್. ಮತ್ತು ಸಿಬ್ಬಂದಿ ತಂಡವು ದಾಳಿ ನಡೆಸಿ ಗಾಂಜಾ ವಶಪಡಿಸಿಕೊಂಡು ಮಹಿಳೆಯನ್ನು ಬಂಧಿಸಿದೆ. ಆರೋಪಿ ಮೆಹಬೂಬಿ ಮೇಲೆ ಈಗಾಗಲೇ ಅಕ್ರಮವಾಗಿ ಗಾಂಜಾ ಮಾರಾಟ ಮಾಡುವ ವಿಚಾರದಲ್ಲಿ ಆಜಾದ್ ನಗರ ಪೊಲೀಸ್ ಠಾಣೆಯಲ್ಲಿ ಗುನ್ನೆ ನಂ. 110/2016ರ ಪ್ರಕರಣದಲ್ಲಿ 6 ತಿಂಗಳು ಸಜೆ, 5000 ದಂಡ ಶಿಕ್ಷೆಗೆ ಒಳಗಾಗಿದ್ದರು. ಮತ್ತೊಂದು ಪ್ರಕರಣದಲ್ಲಿ ನ್ಯಾಯಾಲಯವು 5000/- ದಂಡ ವಿಧಿಸಿರುತ್ತದೆ. ಮಲೇಬೆನ್ನೂರು ಪೊಲೀಸ್ ಠಾಣೆಯಲ್ಲಿಯೂ ಪ್ರಕರಣ ದಾಖಲಾಗಿದೆ.

## ಇಂದು ಆಶಾ ಕಾರ್ಯಕರ್ತೆಯರ ಸಮ್ಮೇಳನ

ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ವತಿಯಿಂದ ನಗರದ ಚನ್ನಗಿರಿ ವಿರೂಪಾಕ್ಷಪ್ಪ ಸಭಾಂಗಣದಲ್ಲಿ ಇಂದು ಮಧ್ಯಾಹ್ನ 12ಕ್ಕೆ ಜಿಲ್ಲಾ ಮಟ್ಟದ ಆಶಾ ಕಾರ್ಯಕರ್ತೆಯರ ಸಮ್ಮೇಳನ ನಡೆಯಲಿದೆ. ಬೆಳಗ್ಗೆ 11 ಗಂಟೆಗೆ ಜಯದೇವ ವೃತ್ತದಿಂದ ಮೆರವಣಿಗೆ ಹೊರಟು ಚನ್ನಗಿರಿ ವಿರೂಪಾಕ್ಷಪ್ಪ ಸಭಾಂಗಣ ತಲುಪಲಿದೆ.

## ದಿ. ಮಹ್ಮದ್ ರಫಿ ಸ್ಮರಣಾರ್ಥ ನಗರದಲ್ಲಿ ಇಂದು ರಸಮಂಜರಿ

ಹೆಸರಾಂತ ಹಿನ್ನೆಲೆ ಗಾಯಕರಾಗಿದ್ದ ದಿ.ಮಹಮ್ಮದ್ ರಫಿ ಅವರು ಇಹಲೋಕ ತ್ಯಜಿಸಿ 44 ವರ್ಷಗಳು ಗತಿಸಿವೆ. ಅವರ ಸ್ಮರಣಾರ್ಥ 'ತುಮ್ ಮುಜೇ ಯುಂ ಭೋಲಾನಾ ಪಾವೋಗೆ' ರಸಮಂಜರಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ದಾವಣಗೆರೆ ಮೆಲೋಡಿ ಮೇಕರ್ಸ್ ಸಹಯೋಗದಲ್ಲಿ ನಡೆಯಲಿರುವ ಈ ಕಾರ್ಯಕ್ರಮ ಆಯಿಷಾ ಶಾದಿ ಮಹಲ್‌ನಲ್ಲಿ ಇಂದು ಸಂಜೆ 5 ಗಂಟೆಗೆ ಪ್ರಾರಂಭಗೊಳ್ಳಲಿದೆ. ಹೈದರಾಬಾದಿ ಗಾಯಕಿ ಚಾಂದನಿ, ಸ್ಥಳೀಯ ಕಲಾವಿದರಾದ ಡಾ.ಅನೀಸ್, ಎ.ಬಿ. ಜಬೀವುಲ್ಲಾ, ಸಲ್ಮಾನ್, ಶಿಲ್ಪ, ರಿಯಾಜ್, ಅಲಿ ಹಾಡಲಿದ್ದಾರೆ. ಪತ್ರಕರ್ತ ಬಿ. ಸಿಕಂದರ್, ಹಿರಿಯ ಕಲಾವಿದರಾದ ಸುಲ್ತಾನ್ ಸಾಬ್, ವಾಜೀದ್ ಸಾಬ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು ಎಂದು ಸಿಂಗರ್ ಅಲಿ ತಿಳಿಸಿದ್ದಾರೆ.

# ಭೈರನಪಾದ ಏತ ನೀರಾವರಿಯ ಹೊಸ ಡಿಪಿಆರ್ ತಯಾರಿಸಲು ಸ್ಥಳ ಪರಿಶೀಲನೆ



ಮಲೇಬೆನ್ನೂರು, ಜು.30- ಹರಿಹರ ತಾಲ್ಲೂಕಿನ ಮಹತ್ವಾಕಾಂಕ್ಷೆಯ ಭೈರನಪಾದ ಏತ ನೀರಾವರಿ ಯೋಜನೆಯ ಹೊಸ ಡಿಪಿಆರ್ ತಯಾರಿಸಲು ಕರ್ನಾಟಕ ನೀರಾವರಿ ನಿಗಮದ ಎಂಡಿ ನೇಮಿಸಿರುವ ಬೆಂಗಳೂರಿನ ಪಿ.ಇ. ಏಜೆನ್ಸಿಯ ಇಂಜಿನಿಯರ್‌ಗಳು ಹಾಗೂ ತಾಂತ್ರಿಕ ತಂಡವು ಮಂಗಳವಾರ ಗೋವಿನಹಾಳ್ ಗ್ರಾಮದ ಸಮೀಪ ಇರುವ ತುಂಗಭದ್ರಾ ನದಿಯ ಭೈರನಪಾದ ಸ್ಥಳ ಪರಿಶೀಲನೆ ನಡೆಸಿದರು.

ನದಿಯಿಂದ ನೀರು ಲಿಫ್ಟ್ ಆಗಿ ಭದ್ರಾ ಅಚ್ಚುಕಟ್ಟಿನ ಕೊನೆ ಭಾಗಕ್ಕೆ ತಲುಪುವ ನಾಲೆಯನ್ನು ವೀಕ್ಷಿಸಿದರು.

ಈ ವೇಳೆ ಹಾಜರಿದ್ದ ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ಮಾತನಾಡಿ, ಹರಿಹರ ತಾಲ್ಲೂಕಿನ ರೈತರಿಗೆ ವರದಾನವಾಗಲಿರುವ ಭೈರನಪಾದ ಏತ ನೀರಾವರಿ ಯೋಜನೆ ಜಾರಿಗೊಳಿಸಲು ಕಾಗಿನೆಲೆ ಶ್ರೀಗಳ ಸಾನ್ನಿಧ್ಯದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸಂಸದರಾದ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರು, ತುಂಬಾ ಆಸಕ್ತಿ ವಹಿಸಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೊಸ ಡಿಪಿಆರ್‌ಗೆ ಸೂಚನೆ ನೀಡಿದ ತಕ್ಷಣವೇ ನೀರಾವರಿ ನಿಗಮದ ಎಂಡಿ ಅವರು ಏಜೆನ್ಸಿ ಫಿಕ್ಸ್ ಮಾಡಿ, ಕಾರ್ಯ ಆರಂಭಿಸಿದ್ದಾರೆ. ಹಾಗಾಗಿ ಈ ವರ್ಷದಲ್ಲೇ ಕಾಮಗಾರಿಗೆ ಚಾಲನೆ ಸಿಗುವ ವಿಶ್ವಾಸ ಇದೆ ಎಂದು ಶ್ರೀನಿವಾಸ್ ಹೇಳಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ಅಬೀದ್ ಅಲಿ, ಭದ್ರಾ ಕಾಡಾ ಮಾಜಿ ಸದಸ್ಯ ಗೋವಿನಹಾಳ್ ರಾಜಣ್ಣ, ಗಂಗಾಮತ ಸಮಾಜದ ಮುಖಂಡ ಚಂದ್ರಪ್ಪ, ಜನತಾ ಬಜಾರ್ ನಿರ್ದೇಶಕ ಪಿ.ಹೆಚ್.ಶಿವಕುಮಾರ್ ಮತ್ತಿತರರು ಈ ಸಂದರ್ಭದಲ್ಲಿ ಹಾಜರಿದ್ದರು.






ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ
ನೇಮಕಗೊಂಡು, ಇಂದು ಅಧಿಕಾರ ಸ್ವೀಕರಿಸುತ್ತಿರುವ

**ಶ್ರೀ ದಿನೇಶ್ ಕೆ. ಶೆಟ್ಟಿ**

ಅವರಿಗೆ ಹಾರ್ದಿಕ ಅಭಿನಂದನೆಗಳು.

**ಎಂ. ಪ್ರವೀಣ್‌ರಾವ್ ಪವಾರ್**

ಮಾಲೀಕರು, ಶ್ರೀ ಅನ್ನಪೂರ್ಣೇಶ್ವರಿ ಎಂಟರ್‌ಪ್ರೈಸಸ್
ಯುವ ಕಾಂಗ್ರೆಸ್ ಮುಖಂಡರು
ಸದಸ್ಯರು, ದಾವಣಗೆರೆ ಲಯನ್ಸ್ ಕ್ಲಬ್



## ಹಾರ್ದಿಕ ಅಭಿನಂದನೆಗಳು



ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ನೂತನ
ಅಧ್ಯಕ್ಷರಾಗಿ ಕರ್ನಾಟಕ ಸರ್ಕಾರದಿಂದ ನೇಮಕಗೊಂಡಿರುವ

ಅಭಿವೃದ್ಧಿಯ ಹರಿಕಾರರೂ, ಕ್ರೀಡಾ ಪ್ರೋತ್ಸಾಹಕರೂ,
ಜಿಲ್ಲಾ ಕ್ರೀಡಾಪಟುಗಳ ಸಂಘದ ಅಧ್ಯಕ್ಷರೂ,
ನಗರಸಭೆ ಮಾಜಿ ಅಧ್ಯಕ್ಷರೂ, ಫುಟ್‌ಬಾಲ್, ಕೇರಂ, ಚೆಸ್,
ಅಡ್ವೇಂಚರ್ಸ್ ಸ್ಪೋರ್ಟ್ಸ್ ಕ್ಲಬ್ ಅಧ್ಯಕ್ಷರೂ,
ಲಯನ್ಸ್ ಕ್ಲಬ್ 2009-10 ಅಧ್ಯಕ್ಷರೂ,
ದಾವಣಗೆರೆ ಕ್ರಿಕೆಟ್ ಕ್ಲಬ್ ಕಾರ್ಯದರ್ಶಿಗಳೂ,
ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ ಸದಸ್ಯರೂ,
ಮಹಾನಗರ ಪಾಲಿಕೆ ಮಾಜಿ ಸದಸ್ಯರೂ, 17ನೇ ಮಾದರಿ ವಾರ್ಡ್‌ನ
ರೂವಾರಿ, ಸಂಘಟನಾ ಚತುರರೂ,
ನಮ್ಮ ಸಂಸ್ಥೆಗಳ ಹಿರಿಯ ನಿರ್ದೇಶಕರೂ ಆದ

**ಶ್ರೀ ದಿನೇಶ್ ಕೆ. ಶೆಟ್ಟಿ**

ಅವರಿಗೆ ಹಾರ್ದಿಕ ಅಭಿನಂದನೆಗಳು.

ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು,
ಸರ್ವ ಸದಸ್ಯರು ಹಾಗೂ ಸಿಬ್ಬಂದಿ ವರ್ಗ

**ದಾವಣಗೆರೆ-ಚಿತ್ರದುರ್ಗ ಜಿಲ್ಲಾ ಬಂಟರ ಸಂಘ (ರಿ.) ದಾವಣಗೆರೆ**
ಹಾಗೂ
**ಕರಾವಳಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ದಾವಣಗೆರೆ.**



## ಅಭಿನಂದನೆಗಳು




ದಾವಣಗೆರೆ-ಹರಿಹರ
ನಗರಾಭಿವೃದ್ಧಿ ಪ್ರಾಧಿಕಾರದ
ನೂತನ ಅಧ್ಯಕ್ಷರಾಗಿ
ಕರ್ನಾಟಕ ಸರ್ಕಾರದಿಂದ
ನೇಮಕಗೊಂಡಿರುವ

ಅಭಿವೃದ್ಧಿಯ ಹರಿಕಾರರೂ, ಕ್ರೀಡಾ ಪ್ರೋತ್ಸಾಹಕರೂ, ಜಿಲ್ಲಾ ಕ್ರೀಡಾಪಟುಗಳ ಸಂಘದ ಅಧ್ಯಕ್ಷರೂ, ನಗರಸಭೆ ಮಾಜಿ ಅಧ್ಯಕ್ಷರೂ, ಫುಟ್‌ಬಾಲ್, ಕೇರಂ, ಚೆಸ್, ಅಡ್ವೇಂಚರ್ಸ್ ಸ್ಪೋರ್ಟ್ಸ್ ಕ್ಲಬ್ ಅಧ್ಯಕ್ಷರೂ, ಲಯನ್ಸ್ ಕ್ಲಬ್ 2009-10 ಅಧ್ಯಕ್ಷರೂ, ದಾವಣಗೆರೆ ಕ್ರಿಕೆಟ್ ಕ್ಲಬ್ ಕಾರ್ಯದರ್ಶಿಗಳೂ, ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ ಸದಸ್ಯರೂ, ಮಹಾನಗರ ಪಾಲಿಕೆ ಮಾಜಿ ಸದಸ್ಯರೂ, ಸಂಘಟನಾ ಚತುರರೂ, ಆದ

**ಶ್ರೀ ದಿನೇಶ್ ಕೆ. ಶೆಟ್ಟಿ**

ಅವರಿಗೆ ಹೃದಯಪೂರ್ವಕ ಅಭಿನಂದನೆಗಳು.
ಶ್ರೀಯುತರ ಅಧಿಕಾರಾವಧಿಯಲ್ಲಿ ಪ್ರಾಧಿಕಾರವು ಅಭಿವೃದ್ಧಿ ಹೊಂದಲಿ ಎಂದು ಹಾರೈಸುತ್ತೇವೆ.

- ಮಲ್ಯಾಡಿ ಪ್ರಭಾಕರ್ ಶೆಟ್ಟಿ
- ಯು. ಕುಶಾಲ್ ಶೆಟ್ಟಿ
- ಕೆ. ಮೋಹನ್‌ದಾಸ್ ಶೆಟ್ಟಿ
- ಸಂತೋಷ್‌ಕುಮಾರ್ ಶೆಟ್ಟಿ, ಬೇಲೂರು
- ಕಿಶನ್ ಚಂದ್ರ ಶೆಟ್ಟಿ
- ಯು. ಭುಜಂಗ ಶೆಟ್ಟಿ
- ಸಿ.ಎ. ಉಮೇಶ್ ಶೆಟ್ಟಿ
- ಜಯಪ್ರಕಾಶ್ ಶೆಟ್ಟಿ



## ವಿದೇಶ ಪ್ರವಾಸ





## ಶುಭ ಹಾರೈಕೆ

ಸ್ವಿಟ್ಜರ್‌ಲ್ಯಾಂಡ್‌ನ ಜ್ಯೂರಿಕ್
ಸಿಟಿಯಲ್ಲಿ ವಾಸಿಸಲು
**ಶ್ರೀಮತಿ ಅರ್ಪಿತ ಬಿ.ಹೆಚ್.**
ಮತ್ತು
**ಶ್ರೀ ಲೋಹಿತ್ ಕುಮಾರ್ ಸಿ.ಪಿ.**
ಅವರು, ದಿನಾಂಕ 1.8.2024ರಂದು
ತೆರಳುತ್ತಿದ್ದು, ಇವರ ವಿದೇಶ
ಪ್ರಯಾಣ ಸುಖಕರವಾಗಿರಲೆಂದು
ಶುಭ ಹಾರೈಸುತ್ತೇವೆ.



ಶ್ರೀಮತಿ ಮಮತ ಮತ್ತು ಶ್ರೀ ಎಸ್.ಜಿ. ವೇದಮೂರ್ತಿ,
ಚಿ. ಚಿನ್ನು, ಚಿ. ಸಮ್ಯಕ್, ಶಾಮನೂರು.

ಶ್ರೀಮತಿ ಎಸ್.ಜಿ. ಬಸಮ್ಮ
ಲಿಂ. ಗೌಡ್ರ ಪರಮೇಶ್ವರಪ್ಪ, ಶಾಮನೂರು.

ಶ್ರೀಮತಿ ಅಕ್ಕಮಹಾದೇವಿ ಮತ್ತು ಶ್ರೀ ಸಿ.ಎಂ. ಪಂಪಣ್ಣ,
ಅಣಜಿಗೆರೆ ಹಾಗೂ ಶಾಮನೂರು ಗೌಡ್ರ ವಂಶಸ್ಥರು.



ಶ್ರೀಮತಿ ಎಸ್.ಜಿ. ಗಿರಿಜಮ್ಮ
ಲಿಂ. ಬಿ.ಕೆ. ಹನುಮಂತಪ್ಪ,
ಕು. ಬಿ.ಹೆಚ್. ಅನುಷ, ಶಾಮನೂರು.



ಶ್ರೀಮತಿ ಶೀಲ ಮತ್ತು
ಡಾ. ಆರ್.ಎಂ. ಗಿರೀಶ್,
ಕು. ನೇಹ, ಕು. ನಿಶಾ, ಅಜ್ಜಿಹಳ್ಳಿ.



ಮಂಜುನಾಥ್
ಎಸ್. ಶಿರಗನಹಳ್ಳಿ


KA/SK/DVG-028/2024-2026. O/P @ B.V. Nagar P.O. JANATHAVANI - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas